# ಕೃಷಿ ಸಂಪದ

ಸಂಪುಟ ೧
ಸಂಚಿಕೆ ೫



ಫೆಬ್ರವರಿ ೨೦೧೦


**ಅತಿ ಸಣ್ಣ ಸಾಲ** ಬಡವರ ಬದುಕಿಗೆ ಆಧಾರ 3

15 

**ಬಿ.ಟಿ. ಬದನೆ** ಬೇಕೆ ಬೇಡವೇ

10 

**ಅಕೇಸಿಯ ಆಗಮನ ಪರ್ವ** ಗೆದ್ದೆತ್ತಿನ ಬಾಲ ಹಿಡಿದು

**ವಿಶೇಷ ಸಂಚಿಕೆ** ಹೊಸತೇನು ? 11

ಕೃಷಿ ಸಂಪದ

ಸಂಪುಟ ೧
ಸಂಚಿಕೆ ೫

ಫೆಬ್ರವರಿ, 2010

**ಸಂಪಾದಕರು**
ಅಡ್ಡೂರು ಕೃಷ್ಣರಾವ್

**ಈ ಸಂಚಿಕೆಯಲ್ಲಿ**
ಅಡ್ಡೂರು ಕೃಷ್ಣರಾವ್
ಶಿವಾನಂದ ಕಳವೆ
ಹರ್ಷವರ್ಧನ ಶೀಲವಂತ
ಹರಿ ಪ್ರಸಾದ್ ನಾಡಿಗ್
ಕೃಷ್ಣಪ್ರಸಾದ್ ಬೊಳುಂಬು
ಶ್ಯಾಮ ಭಟ್
ವಿನಾಯಕ ಭಟ್
ಗಾಣಧಾಳು ಶ್ರೀಕಂಠ

**ಪುಟ ವಿನ್ಯಾಸ, ಮುಖಪುಟ ಚಿತ್ರ**
ಹರಿ ಪ್ರಸಾದ್ ನಾಡಿಗ್

**ಸಂಪರ್ಕ:**
krushi@sampada.net
ದೂರವಾಣಿ: 080-32900111
http://krushi.sampada.net

‘ಕೃಷಿ ಸಂಪದ’
‘ಸಂಪದ’ದ ಒಂದು ಯೋಜನೆ
http://sampada.net
ಸಂಪದ

# ನಿಮ್ಮೊಂದಿಗೆ



‘ಹಿಂದಿನ ವರುಷಗಳಿಗೆ ಹೋಲಿಸಿದಾಗ, ಕಳೆದ ವರುಷ ರೈತರ ಆತ್ಮಹತ್ಯೆ ಕಡಿಮೆಯಾಗಿದೆ’. ಹೀಗೊಂದು ಪತ್ರಿಕಾ ಸುದ್ದಿ.

ಈಗಲೂ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಲೇ ಇದ್ದಾರೆ ಎಂಬುದು ನಿಜವಾದ ಸುದ್ದಿ. ಯಾಕೆ? ಎಂಬ ಪ್ರಶ್ನೆ ಮುಖ್ಯ. ಇದಕ್ಕೆ ಉತ್ತರ ಕಂಡುಕೊಳ್ಳಲು ಯಾವುದೇ ಅಧ್ಯಯನ, ಸಂಶೋಧನೆ, ಸಮಿತಿ, ವರದಿ ಇವೆಲ್ಲ ಬೇಕಾಗಿಲ್ಲ. ತೊಗರಿಬೇಳೆಯ ಬೆಲೆ ಕಿಲೋಕ್ಕೆ ರೂಪಾಯಿ ೧೦೦ ದಾಟಿದೆ. ಅಕ್ಕಿಯ ಬೆಲೆ ಕಿಲೋಕ್ಕೆ ರೂಪಾಯಿ ೩೫ ದಾಟಿದೆ. ಹಲವು ತರಕಾರಿ ಹಾಗೂ ಹಣ್ಣುಗಳ ಬೆಲೆ ಕಳೆದ ಮೂರು ವರುಷಗಳಲ್ಲಿ ಎರಡು ಪಟ್ಟು ಹೆಚ್ಚಾಗಿದೆ. ಆದರೆ ಗ್ರಾಹಕರು ಪಾವತಿಸುವ ಪ್ರತಿಯೊಂದು ರೂಪಾಯಿಯಲ್ಲಿ ಇವನ್ನೆಲ್ಲ ಬೆಳೆದ ರೈತನಿಗೆ ಎಷ್ಟು ಸಿಗುತ್ತದೆ ಎಂಬುದೇ ಪ್ರಶ್ನೆ. ಅದು ರೂಪಾಯಿಯಲ್ಲಿ ೩೦ ಪೈಸೆಯನ್ನೂ ದಾಟೋದಿಲ್ಲ ಎಂಬುದು ನಮಗೆಲ್ಲ ಗೊತ್ತಿದೆ. ಅಂದರೆ ಕೃಷಿ ಉತ್ಪನ್ನಗಳಿಗೆ ಗ್ರಾಹಕ ಕೊಡುವ ಹಣದ ಶೇಕಡಾ ೫೦ರಿಂದ ೭೦ ಮಧ್ಯವರ್ತಿಗಳ ಪಾಲಾಗುತ್ತಿದೆ. ಕಾಫಿಹುಡಿ, ಚಾಹುಡಿ, ರೆಡಿಮೇಡ್ ಸಾಂಬಾರ / ಮಸಾಲೆ ಹುಡಿಗಳು, ಇಡ್ಲಿ / ಜಾಮೂನ್ ರೆಡಿಮಿಕ್ಸ್, ಕಾರ್ನ್ ಫ್ಲೇಕ್ಸ್ - ಇಂತಹ ಮೌಲ್ಯವರ್ಧಿತ ಐಟಂಗಳ ಮಾರಾಟದ ಬೆಲೆಯಲ್ಲಂತೂ, ಇವುಗಳಿಗೆ ಮೂಲವಾದ ಬೆಳೆಗಳನ್ನು ಬೆಳೆಸಿದ ರೈತನಿಗೆ ಚಿಕ್ಕಾಸೂ ದಕ್ಕುವುದಿಲ್ಲ. ಸಕ್ಕರೆ ಮತ್ತು ಕಬ್ಬಿನ ಉದಾಹರಣೆ ಪರಿಶೀಲಿಸೋಣ. ಸಕ್ಕರೆಯ ಬೆಲೆ ಇತ್ತೀಚೆಗೆ ಭಾರತದ ಉದ್ದಗಲದಲ್ಲಿ ಕಿಲೋಕ್ಕೆ ರೂಪಾಯಿ ೧೦ ಏರಿತು. ಮಾರಾಟಗಾರರು ಯಾವುದೇ ಹೋರಾಟ ಅಥವಾ ಪ್ರತಿಭಟನೆ ಮಾಡದೆ ಬೆಲೆ ಏರಿಸಿಕೊಂಡರು. ಆದರೆ ಸಕ್ಕರೆಯ ಮೂಲವಾದ ಕಬ್ಬಿನ ಬೆಲೆ ಏರಲೇ ಇಲ್ಲ. ಸರಕಾರ ಇದನ್ನು ನೋಡುತ್ತ ತೆಪ್ಪಗೆ ಕುಳಿತಿತು. ಹಾಗಾಗಿ, ಅತ್ತ ಉತ್ತರಪ್ರದೇಶದಲ್ಲಿ ರೈತರು ರಸ್ತೆಗೆ ಇಳಿದು ‘ಸಕ್ಕರೆಯ ಬೆಲೆ ಏರಿದೆ. ಕಬ್ಬಿಗೂ ಸೂಕ್ತ ಬೆಲೆ ಕೊಡಿ’ ಎಂದು ಹೋರಾಡಬೇಕಾಯಿತು. ಅನಂತರ ಅಲ್ಲಿನ ಸರಕಾರ ಕಬ್ಬಿಗೆ ಪಾವತಿಸುವ ಬೆಲೆ ಏರಿಸಲು ಒಪ್ಪಿಕೊಂಡಿತು. ಇತ್ತ ಕರ್ನಾಟಕದಲ್ಲಿಯೂ ಇದೇ ಕತೆ. ಕರ್ನಾಟಕದ ವಿವಿಧ ಭಾಗಗಳ ಕಬ್ಬು ಬೆಳೆಗಾರರು ೧೯ ಜನವರಿ ೨೦೧೦ರಂದು ರಾಜಧಾನಿ ಬೆಂಗಳೂರಿನಲ್ಲಿ ಜಮಾಯಿಸಿ, ಭಾರೀ ಪ್ರತಿಭಟನೆ ನಡೆಸಬೇಕಾಯಿತು. ಅದಾದ ಬಳಿಕ, ಕಬ್ಬು ಸಲಹಾ ಬೆಲೆ ನಿಗದಿಗೆ ಸರಕಾರದ ಸಮ್ಮತಿ. ಈ ಬಗ್ಗೆ ಅಧ್ಯಯನ ನಡೆಸಿ, ವರದಿ ನೀಡಲು ಉನ್ನತ ಮಟ್ಟದ ತಾಂತ್ರಿಕ ಸಮಿತಿ ರಚಿಸಲು ಮುಖ್ಯಮಂತ್ರಿ ಅವರಿಂದ ಆಶ್ವಾಸನೆ. ಎಂತಹ ವಿಪರ್ಯಾಸ! ರೈತರಿಗೆ ಸಿಗುತ್ತಿರುವುದು ಆಶ್ವಾಸನೆಗಳು ಮಾತ್ರ. ರೈತರು ಸಾವಿರಾರು ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಾಗಲೂ ಅನಾಥವಾದ ಅವರ ಕುಟುಂಬಗಳಿಗೆ ಸಿಗುವುದು ಕಿಂಚಿತ್ ಪರಿಹಾರ. ರೈತರ ಸಂಕಟ ಪರಿಹರಿಸಬೇಕಾದರೆ, ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ಸೂಕ್ತ ಬೆಲೆ ಸಿಗುವಂತೆ ಮಾಡಬೇಕು. ಆಗ ಕೃಷಿ ಲಾಭದಾಯಕವಾಗಿ, ತಲೆತಲಾಂತರದಿಂದ ಕೃಷಿಯನ್ನೇ ನಂಬಿರುವ ರೈತರಿಗೆ ನೆಮ್ಮದಿಯ ಬಾಳು ಬಾಳಲು ಸಾಧ್ಯವಾದೀತು, ಅಲ್ಲವೇ?

- **ಸಂಪಾದಕ**

ಲೇಖನಗಳ ಅಭಿಪ್ರಾಯಗಳು ಮತ್ತು ಹಕ್ಕುಗಳು ಆಯಾ ಲೇಖಕರದ್ದು. ಕೆಲವು ಚಿತ್ರಗಳನ್ನು ಹೊರತುಪಡಿಸಿ ಕೃಷಿ ಸಂಪದ ಇ-ಪತ್ರಿಕೆಯಲ್ಲಿರುವ ಕಂಟೆಂಟ್ Creative Commons Attribution Share Alike ಲೈಸೆನ್ಸಿನಡಿ ಲಭ್ಯವಿದೆ.

# ಅತಿ ಸಣ್ಣ ಸಾಲ

## ಬಡವರ ಬದುಕಿಗೆ ಆಧಾರ

> “ ಸತ್ತವರ ಅಂತ್ಯಸಂಸ್ಕಾರಕ್ಕಾಗಿ ಸೌದೆ ಖರೀದಿಸಲಿಕ್ಕೂ ಕೆಲವರು ಸಾಲ ಪಡೆದಿದ್ದಾರೆ

ಮಗನ ಕುಟುಂಬದೊಂದಿಗೆ ವಯಸ್ಸಾದ ತಾಯಿ ವಾಸಿಸುವುದು ರೂಢಿ. ಆದರೆ ಒರಿಸ್ಸಾದ ಸಂಬಾಲಪುರ ಜಿಲ್ಲೆಯ ಲತಾ ಬಾಗ್ ಇದಕ್ಕೆ ವಿನಾಯ್ತಿ. ಆಕೆಯ ವಾಸ ಮಗಳು ಮತ್ತು ಅಳಿಯನ ಜೊತೆ. ಹಾಗಂತ ಅವಳೇನೂ ಅವರ ಕುಟುಂಬಕ್ಕೆ ಹೊರೆಯಾಗಿಲ್ಲ. ನಿಜ ಹೇಳಬೇಕೆಂದರೆ, ಆಕೆ ಅವರಿಗೊಂದು ಆಸ್ತಿ ಇದ್ದಂತೆ. ಯಾಕೆಂದರೆ ಊರಿನ ಮಾರುಕಟ್ಟೆಯಲ್ಲಿ ಅವಳದು ತರಕಾರಿ ವ್ಯಾಪಾರ. ಉತ್ತಮ ಆದಾಯ ಗಳಿಸುತ್ತಿರುವ ಆಕೆ ಕುಟುಂಬದ ವೆಚ್ಚಕ್ಕೆ ಸಾಕಷ್ಟು ಹಣ ನೀಡುತ್ತಾಳೆ. ಇತ್ತೀಚೆಗೆ ಅವಳ ಆದಾಯ ಹೆಚ್ಚಾಗಿದೆ. ಇದಕ್ಕೆ ಕಾರಣ ‘ಅಮರ ಬಿಸ್ವಾಸ್’ ಸಂಸ್ಥೆಯಿಂದ ಪಡೆದ ಅತಿ ಸಣ್ಣ ಸಾಲ. ಮುಂಚೆ ಅವಳು ತನ್ನ ವ್ಯಾಪಾರಕ್ಕಾಗಿ ಸ್ಥಳೀಯ ಲೇವಾದೇವಿದಾರರಿಂದ ಸಾಲ ಪಡೆಯುತ್ತಿದ್ದಳು. ಅವರ ಅಧಿಕ ಬಡ್ಡಿಯಿಂದಾಗಿ ಆಕೆ ಸಾಲದ ಸುಳಿಯಲ್ಲಿ ಸಿಲುಕಿದ್ದಳು. ಈಗ ಹಾಗಿಲ್ಲ. ‘ಅಮರ ಬಿಸ್ವಾಸ್’ನ ಅತಿ ಸಣ್ಣ ಸಾಲ ಅವಳಿಗೆ ಹೊರೆಯಾಗಿಲ್ಲ.

## ಅತಿ ಸಣ್ಣ ಸಾಲದ ಐಡಿಯಾ

ಅತಿ ಸಣ್ಣ ಸಾಲ ಎಂದರೇನು? ರೂ.೧೦೦ರಿಂದ ರೂ.೧,೦೦೦ ವರೆಗಿನ ಸಾಲ. ಇದರ ಉದ್ದೇಶವೇನು? ಸ್ವ-ಉದ್ಯೋಗ ಮಾಡಲು ಅಥವಾ ಸಂಕಟದಲ್ಲಿರುವ ಬಡವರಿಗೆ ತುರ್ತಿನ ಅಗತ್ಯಕ್ಕಾಗಿ ಹಣ ಸಹಾಯ. ಅಮರ ಬಿಸ್ವಾ ನ ಅತಿ ಸಣ್ಣ ಸಾಲಗಳಿಗೆ ಬಡ್ಡಿಯಿಲ್ಲ ಎಂಬುದೇ ವಿಶೇಷ. ‘ಅಮರ ಬಿಸ್ವಾಸ್’ ಆರಂಭಿಸಿದ ಜಯಶ್ರೀ ಮಹಾಂತಿ ಅನಿವಾಸಿ ಭಾರತೀಯಳು. ತನಗೆ ಅತಿ ಸಣ್ಣ ಸಾಲದ ಐಡಿಯಾ ಹುಟ್ಟಿದ್ದು ಹೇಗೆಂದು ನೆನಪು ಮಾಡಿಕೊಳ್ಳುತ್ತಾರೆ, ‘ಸಂಬಾಲಪುರದಲ್ಲಿ ನನ್ನ ಮನೆಗೆಲಸದವಳು ಲೇವಾದೇವಿದಾರನಿಗೆ ಪ್ರತಿ ತಿಂಗಳೂ ೫೦ ರೂಪಾಯಿ ಬಡ್ಡಿ ಕೊಡುತ್ತಿದ್ದಳು. ಅವಳು ತಗೊಂಡಿದ್ದ ಸಾಲ ಬರೀ ೫೦೦ ರೂಪಾಯಿ. ಅವಳ ಮಗನ ಔಷಧಿಗಾಗಿ ತಗೊಂಡಿದ್ದ ಸಾಲ ಅದು.

‘ಲೇವಾದೇವಿದಾರನ ಷರತ್ತು ಏನಾಗಿತ್ತೆಂದರೆ, ತಗೊಂಡ ಸಾಲ ೫೦೦ ರೂಪಾಯಿ ಒಂದೇ ಗಂಟಿನಲ್ಲಿ ಹಿಂದೆ ಕೊಡಬೇಕು ಅಥವಾ ಹಾಗೆ ಹಿಂದೆ ಕೊಡುವ ತನಕ ತಿಂಗಳಿಗೆ ೫೦ ರೂಪಾಯಿ ಬಡ್ಡಿ ಕೊಡುತ್ತಲೇ ಇರಬೇಕು. ಅವಳ ಜೀವಮಾನದಲ್ಲಿ ಯಾವತ್ತೂ ಅವಳ ಕೈಯಲ್ಲಿ ಒಟ್ಟಾಗಿ ೫೦೦ ರೂಪಾಯಿ ಇರುವುದಿಲ್ಲ. ಲೇವಾದೇವಿದಾರನಿಂದ ಎಂತಹ ಶೋಷಣೆ! ಆದರೆ ಅವಳಿಗೆ ಈ ಸುಳಿಯಿಂದ ಪಾರಾಗಲು ಪ್ರತಿ ತಿಂಗಳೂ ಬಡ್ಡಿ ಕೊಡುವುದಲ್ಲದೆ ಬೇರೆ ದಾರಿಯೇ ಇರಲಿಲ್ಲ. ಇಂಥವರಿಗೆ ಅತಿ ಸಣ್ಣ ಸಾಲ ಕೊಟ್ಟರೆ ಅವರ ಬದುಕೇ ಬದಲಾದೀತೆಂಬ ಐಡಿಯಾ ಹುಟ್ಟಿತು’.

‘ಅಮರ ಬಿಸ್ವಾಸ್’ನ ನಿಧಿ ಎಷ್ಟಿದೆ? ಬಡವರಿಗೆ ಸಾಲ ನೀಡಲಿಕ್ಕಾಗಿ ರೂ. ೪ ಲಕ್ಷ ಮತ್ತು ಭದ್ರತಾ ಠೇವಣಿಯಾಗಿ ರೂ. ೫ ಲಕ್ಷ. ಈಗಾಗಲೇ ಸಾಲ ಪಡೆದಿರುವ ಮಹಿಳಾ ಸಾಲಗಾರರು ಹೊಸ ಮಹಿಳಾ ಸಾಲಗರರನ್ನು ಪರಿಚಯಿಸುತ್ತಾರೆ. ಸಾಲ ಪಡೆಯಲಿಕ್ಕಾಗಿ ಯಾವುದೇ ಭದ್ರತೆ ಕೊಡಬೇಕಾಗಿಲ್ಲ ಅಥವಾ ಸಾಲಕ್ಕೆ ಬಡ್ಡಿ ಪಾವತಿಸಬೇಕಾಗಿಲ್ಲ. ಎಲ್ಲ ವ್ಯವಹಾರಗಳಿಗೂ ಪರಸ್ಪರ ವಿಶ್ವಾಸವೇ ಆಧಾರ. ಸಾಲ ಪಡೆದವರು ಮರುಪಾವತಿಸುತ್ತಾರೆ ಎಂಬ ಗ್ಯಾರಂಟಿ ಇದೆಯೇ? ಈ ಪ್ರಶ್ನೆಗೆ ಜಯಶ್ರೀ ಮಹಾಂತಿ ಅವರ ಉತ್ತರ, ‘ಅಮರ ಬಿಸ್ವಾ ನ ಅತಿ ಸಣ್ಣ ಸಾಲ ಕಾರ್ಯಕ್ರಮದ ಮೂಲಾಧಾರ ವಿಶ್ವಾಸ. ಸಾಲ ಕೊಡುವಾಗ, ಸಾಲ ಪಡೆಯುವವರ ಸಾಲ ಮರುಪಾವತಿ ಸಾಮರ್ಥ್ಯವನ್ನು ಅಂದಾಜಿಸುತ್ತೇವೆ. ಅದಕ್ಕಾಗಿ ಈ ಮೂರು ಪ್ರಶ್ನೆಗಳನ್ನು ಕೇಳುತ್ತೇವೆ: ನಿನಗೆ ಸಾಲ ಯಾಕೆ? ಸಾಲದ ಹಣದಿಂದ ಏನು ಮಾಡುತ್ತೀ? ಸಾಲ ಮರುಪಾವತಿ ಹೇಗೆ ಮಾಡುತ್ತೀ?’

ಕಳೆದ ಒಂದು ವರುಷದಲ್ಲಿ ೧,೨೦೦ ಜನರಿಗೆ ನೀಡಲಾದ ಸಾಲದಲ್ಲಿ ಶೇಕಡಾ ೮೦ ಮರುಪಾವತಿ ಆಗಿದೆ. ಉಳಿದವರು ಸಾಲ ಮರುಪಾವತಿಗೆ ಹೆಚ್ಚಿನ ಅವಧಿ ಕೇಳಿದ್ದಾರೆ. ಯಾರಿಗೆ ಸಾಲ ನೀಡಬೇಕೆಂಬುದನ್ನು ಸಾಲ ಪಡೆಯುವವರೇ ನಿರ್ಧರಿಸುತ್ತಾರೆ. ಹತ್ತು ಜನ ಸಾಲ ಕೇಳುತ್ತಾರೆ, ಆದರೆ ಅಮರ ಬಿಸ್ವಾ ಗೆ ಏಳು ಜನರಿಗೆ ಮಾತ್ರ ಸಾಲ ನೀಡಲು ಸಾಧ್ಯ ಎಂದಿಟ್ಟುಕೊಳ್ಳಿ. ಆಗ, ಆ ಹತ್ತು ಮಹಿಳೆಯರೇ ತಮ್ಮಲ್ಲಿ ಯಾರಿಗೆ ಸಾಲ ಅತ್ಯವಶ್ಯ ಎಂದು ನಿರ್ಧರಿಸುತ್ತಾರೆ. ‘ಮಹಿಳೆಯರಿಗೆ ಮಹಿಳೆಯರಿಂದಲೇ ಸಹಾಯ’ ಎಂಬುದೇ ತತ್ವ.

ಮಾಸಿಕ ರೂ.೩,೦೦೦ಕ್ಕಿಂತ ಕಡಿಮೆ ಆದಾಯದ ಅತಿ ಬಡವರಿಗಂತೂ ಅತಿ ಸಣ್ಣ ಸಾಲದಿಂದ ದೊಡ್ಡ ಸಹಾಯ. ‘ತಪಸ್ವಿನಿಯ ಮಗಳ ಮದುವೆ ಆಗಿತ್ತು. ಆದರೆ ಮಗಳನ್ನು ಗಂಡನ ಮನೆಗೆ ಕಳಿಸುವಾಗ ಕೊಡಬೇಕಾದ ವಸ್ತುಗಳನ್ನು ಖರೀದಿಸಲು ಅವಳ ಬಳಿ ಹಣವಿಲ್ಲ. ಅವಳಿಗೆ ಬೇಕಾಗಿದ್ದದ್ದು ಕೇವಲ ೪೦೦ ರೂಪಾಯಿ. ನಮ್ಮ ಸಾಲದಿಂದಾಗಿ ಅವಳ ಮಾನ ಉಳಿಯಿತು. ಸತ್ತವರ ಅಂತ್ಯಸಂಸ್ಕಾರಕ್ಕಾಗಿ ಸೌದೆ ಖರೀದಿಸಲಿಕ್ಕೂ ಕೆಲವರು ಸಾಲ ಪಡೆದಿದ್ದಾರೆ’ ಎನ್ನುತ್ತಾರೆ ಜಯಶ್ರೀ.

## ಹೀಗಿದೆ ಗ್ರಾಮೀಣ ಭಾರತ

ಸ್ವ-ಉದ್ಯೋಗ ಕೈಗೊಳ್ಳಲಿಕ್ಕಾಗಿ ಅಮರ ಬಿಸ್ವಾಸ್ ನೀಡಿದ ಸಾಲಗಳೂ ಬಡವರ ಬದುಕಿಗೆ ಆಧಾರವಾಗಿವೆ. ಬಿನೋದಿನಿಯದು ಸಣ್ಣ ವ್ಯವಹಾರ: ಅವಳಿಂದ ಹಪ್ಪಳ ತಯಾರಿ, ಅವಳ ಅಮ್ಮನಿಂದ ಅವುಗಳ ಮಾರಾಟ. ಆಕೆ ಅತಿ ಸಣ್ಣ ಸಾಲ ಪಡೆದು, ಹೆಚ್ಚು ಹಪ್ಪಳ ತಯಾರಿಸತೊಡಗಿದ್ದಾಳೆ. ಲತಾಬಾಗ್ ಹೇಳುತ್ತಾಳೆ, ‘ಮುಂಚೆ ಹಣ ಬೇಕೆಂದಾಗ ನಮಗೆ ಇದ್ದದ್ದು ಒಂದೇ ದಾರಿ. ಅದೆಂದರೆ ಲೇವಾದೇವಿದಾರರಿಂದ ಸಾಲ ತಗೊಳ್ಳೋದು. ಈಗ ಹಾಗಲ್ಲ. ಅಮರ ಬಿಸ್ವಾ ನಿಂದ ಸಾಲ ಸಿಗುತ್ತದೆ ಎಂಬ ವಿಶ್ವಾಸವಿದೆ’.


ಹಾಗಾದರೆ ಸಂಬಾಲ ಪುರದಲ್ಲಿ ಸಣ್ಣಸಾಲಗಳ ವ್ಯವಹಾರ ಇಲ್ಲವೇ? ಅಲ್ಲಿನ ಸಣ್ಣಸಾಲದ ಸಂಸ್ಥೆಗಳು (ಮೈಕ್ರೋ ಫೈನಾನ್ಸ ಇನ ಸ್ಟಿಟ್ಯೂಷನ್ಸ) ತಮ್ಮ ಸಾಧನೆಗಾಗಿ ತಮ್ಮ ಬೆನ್ನು ತಟ್ಟಿಕೊಳ್ಳುತ್ತಿವೆ. ಆದರೆ, ಅವುಗಳ ವ್ಯವಹಾರ ಇಳಿಮುಖವಾಗಿದೆ. ಕೆಲವು ಸಂದರ್ಭಗಳಲ್ಲಿ ಅಸಹಾಯಕ ಮಹಿಳೆಯರು ಪಡೆದ ಸಾಲ ಮರುಪಾವತಿಗಾಗಿ ಅವರನ್ನು ಬೆದರಿಸಲಾಗಿದೆ. ಇದರಿಂದಾಗಿ, ಮಹಿಳೆಯರು ಪುನಃ ಲೇವಾದೇವಿದಾರರನ್ನೇ ಸಾಲಕ್ಕಾಗಿ ಅಂಗಲಾಚಬೇಕಾಯಿತು. ಆದ್ದರಿಂದ, ‘ಮಹಿಳೆಯರನ್ನು ಲೇವಾದೇವಿದಾರರ ಮುಷ್ಟಿಯಿಂದ ಬಿಡಿಸಬೇಕೆಂಬ’ ಸಣ್ಣಸಾಲ ಕಾರ್ಯಕ್ರಮದ ಮೂಲ ಉದ್ದೇಶಕ್ಕೇ ಪೆಟ್ಟು ಬಿದ್ದಿದೆ.

ಸಣ್ಣಸಾಲ ಸಂಸ್ಥೆಗಳು ಹೇಳುವುದು ಮಹಿಳಾ ಸಬಲೀಕರಣ, ಆದರೆ ಮಾಡುವುದು ಬ್ಯಾಂಕಿಂಗ್ ವ್ಯವಹಾರ. ಬಹುಪಾಲು ಸಂಸ್ಥೆಗಳು ವಾರ್ಷಿಕ ಶೇಕಡಾ ೩೦ರಷ್ಟು ಅಧಿಕ ಬಡ್ಡಿ ವಸೂಲಿ ಮಾಡುತ್ತಿವೆ.


CC BY SA

# ಭೂಮಿ ನಂಬಿ ಬದುಕಿದ ನೇಗಿಲ ಶರಣ

## ಮಲ್ಲಣ್ಣ ಶೆಂಕ್ರೆಪ್ಪ ನಾಗರಾಳ



ಹರ್ಷವರ್ಧನ ಶೀಲವಂತ

'ರೈತ ಮೊದಲು ಹುಟ್ಟಿದ್ನೋ? ಭೂಮಿ ಮೊದಲು ಹುಟ್ಟಿತೋ? ನೋಡ್ರಿ.. ಭೂಮಿ ಆ ದೇವರ ಸೃಷ್ಟಿ ಅಂತ ತಾನಾಗಿಯೇ ಬೆಳಿ ಬೆಳಕೊಂತ ಬಂತಲ್ಲ. ಆದರ ಹೆಚ್ಚಿನ ಬೆಳಿ ಬೆಳಿಬೇಕು ಅಂತ ಹೈಬ್ರೀಡ್ ಬೀಜ, ರಾಸಾಯನಿಕ ಗೊಬ್ಬರ ಬಳಸಲಿಕ್ಕೆ ಶುರು ಮಾಡಿದ್ವಿ. ಘನಮಠದ ಶಿವಯೋಗಿಗಳು ಹೇಳಿಧಾಂಗ ಸಾವಯವ ಪದ್ಧತಿ ಕೃಷಿ ಮಾಡಿದ್ರ ನಾಲ್ಕಾರು ಚೀಲ ಕಡಿಮೆ ಬಂದೀತು. ಆದ್ರ ನಮ್ಮ ಭೂಮಿ ಹೆಚ್ಚು ಬಾಳಕಿ ಬರ್ತದ'

ಧಾರವಾಡದ ಕೃಷಿ ವಿಶ್ವವಿದ್ಯಾಲಯದ ೨೦೦೬ನೇ ಸಾಲಿನ ೨೦ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರಶಸ್ತಿಗೆ ಭಾಜನರಾದ ಹುನಗುಂದದ ಪ್ರಗತಿಪರ ಕೃಷಿಕ ಡಾ.ಮಲ್ಲಣ್ಣ ಶೆಂಕ್ರೆಪ್ಪ ನಾಗರಾಳ ಅವರ ಹೃದಯಾಂತರಾಳದ ಮಾತುಗಳಿವು.

ಬಾಗಲಕೋಟೆ ಜಿಲ್ಲೆ, ಹುನಗುಂದದ ಶ್ರೀ ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘದ ವಿ.ಎಂ.ಎಸ್.ಆರ್. ಕಲಾ, ವಿಜ್ಞಾನ ಹಾಗು ವಿ.ಎಂ. ವಾಣಿಜ್ಯ ಮಹಾವಿದ್ಯಾಲಯದ ಸಸ್ಯಶಾಸ್ತ್ರ ವಿಭಾಗ ಕೃಷಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಪಾಲ್ಗೊಳ್ಳಲು ಅವರು ಆಗಮಿಸಿದ್ದರು.

ಒಕ್ಕಲುತನ ತೀವ್ರ ಶ್ರಮದ್ದು. ಇದು ಮಣ್ಣಿನ ಮಕ್ಕಳ ಉಪಜೀವನಕ್ಕೊಂದು ಹಾದಿ. ಆದರೆ ಅವರ ಶ್ರಮದ ಅನ್ನದ ಮೇಲೆ ಜಗತ್ತು ನಿಂತಿದೆ.

ರೈತ ಭೂಮಿ ಸೇವೆ ಮಾಡ್ತಾ, ತನ್ನ ಬೆವರು ಅದಕ್ಕೆ ಉಣಿಸ್ತಾ, ಒಕ್ಕಲುತನ ಶರಣ ಸಂಸ್ಕೃತಿ ಅಂತ ನಂಬಿ, ನಿಸರ್ಗ ಪಾಲನೆ, ಪೋಷಣೆ ಧರ್ಮ ಅಂತ ಪಾಲಿಸಿಕೊಂಡು ದನ ಕರುಗಳನ್ನು ಸಾಕಿಕೊಂಡು, ಭೂಮಿ ನಂಬಿ ಬದುಕಿದವ ನೇಗಿಲ ಶರಣ- ರೈತ. ಡಾ.ಮಲ್ಲಣ್ಣ ಅವರು ಅಭಿಪ್ರಾಯ ಪಡುವಂತೆ, ನಾವು ಈಗ ಪ್ರತಿಪಾದಿಸುತ್ತಿರುವ ಸಾವಯವ ಕೃಷಿ ಇಂದು-ನಿನ್ನೆಯದಲ್ಲ. ದನ-ಕರುಗಳ ತ್ಯಾಜ್ಯ, ಜೀವಾಂಮೃತ, ಹೊಲದ ಕಸ-ಕಡ್ಡಿ ಕೊಚ್ಚಿ ಹಾಕಿ ಹಿರಿಯರು ಮಾಡಿಕೊಳ್ಳುತ್ತ ಬಂದ ಅನ್ನ ಬೆಳೆಯುವ ಕಾರ್ಯ. ಅದು ಐತಿಹಾಸಿಕವಾದದ್ದು. ಈ ತತ್ವ ಘನಮಠ ಶಿವಯೋಗಿಗಳು ಪ್ರತಿಪಾದಿಸಿದ್ದು. ಅದನ್ನೇ ನಮ್ಮ ಅಪ್ಪ, ಅಜ್ಜ ಈಗ ನಾನು ಪಾಲಿಸಿಕೊಂಡು ಹೊರಟೇನಿ ಎನ್ನುತ್ತಾರೆ.

ಇವತ್ತು ಅನಿವಾರ್ಯ ಪಕ್ಷ ಶಗಣಿ ಗೊಬ್ಬರ ಎಲ್ಲಾಕಡೆ ಕಡಿಮೆ ಪ್ರಮಾಣದಲ್ಲಿ ಸಿಗುತ್ತಿದೆ. ಯಂತ್ರೋಪಕರಣ ಹೊಲಗಳಿಗೆ ನಾಲ್ಕೂ ಕಡೆಯಿಂದ ಲಗ್ಗಿ ಹಾಕ್ಯಾವು. ಭೂಮಿ ಅತೀ ಹೆಚ್ಚು ನೀರು ಉಂಡಾಗ ೧ ಕೂರಿಗೆ ಅಂದ್ರ ೪ ಎಕರೆಗೆ ಬಿಳಿ ಜೋಳ ಬೆಳೆಯಲು ರಾಸಾಯನಿಕ ಗೊಬ್ಬರ ೨ ಚೀಲ ಡಿ.ಎ.ಪಿ, ೧ ಚೀಲ ಯೂರಿಯಾ ಅಥವಾ ೪ ಎಕರೆ ಕಡ್ಲಿ ಬಿತ್ತಿದರ ೨ ಚೀಲ ಡಿ.ಎ.ಪಿ ಹಾಕ್ತೇವಿ.

(ಎಂಟನೇ ಪುಟದಲ್ಲಿ ಮುಂದೆವರೆದಿದೆ)

ಮೂರನೆಯ ಪುಟದಿಂದ

ಇನ್ನು ಕೆಲವು ಸಂಸ್ಥೆಗಳ ಬಡ್ಡಿದರ ಕಡಿಮೆ, ಆದರೆ ಶುಲ್ಕಗಳು ಜಾಸ್ತಿ. ಇದಕ್ಕೆ ಹೋಲಿಸಿದಾಗ, ಅತಿ ಸಣ್ಣ ಸಾಲದ ಸಂಸ್ಥೆಗಳಿಂದ ಸಾಲಗಾರರಿಗೆ ಅನುಕೂಲ. ಯಾಕೆಂದರೆ ಈ ಸಂಸ್ಥೆಗಳಿಗೆ ಲಾಭದ ಉದ್ದೇಶ ಇಲ್ಲ. ಸಂಬಾಲ ಪುರದ ಯಶಸ್ಸಿನಿಂದಾಗಿ, ಸುತ್ತಲಿನ ಭದ್ರಕ್, ಜಗತ ಸಿಂಗ ಪುರ, ನೌಪಾದ, ರ್ಗರ್ ಮತ್ತು ಅನುಗುಲ್ ಜಿಲ್ಲೆಗಳಿಗೂ ಅತಿ ಸಣ್ಣ ಸಾಲದ ಐಡಿಯಾ ವಿಸ್ತರಿಸಿದೆ.

ಪರಸ್ಪರ ವಿಶ್ವಾಸವೇ ಈ ಸಂಸ್ಥೆಗಳ ಜೀವಾಳ. ಅದನ್ನು ಉಳಿಸಿಕೊಳ್ಳಲು ಇವುಗಳ ಗಾತ್ರ ಸಣ್ಣದಿರಲೇ ಬೇಕು. ಬಡವರ ಬದುಕಿನಲ್ಲಿ ಸಣ್ಣ ಸಾಲಗಳ ಬದಲಾಗಿ ಅತಿ ಸಣ್ಣ ಸಾಲಗಳೇ ಆರ್ಥಿಕ ಅಧಾರವಾಗಲು ಸಾಧ್ಯವೇ? ಈ ಪ್ರಶ್ನೆಗೆ ಕಾಲವೇ ಉತ್ತರಿಸಬೇಕು.

**- ಅಡ್ಡೂರು ಕೃಷ್ಣ ರಾವ್**

# ಕಾಯಕದಲ್ಲಿ ಹಣ್ಣಾದವರು

'ಕೃಷಿ ಕಾಯಕದಲ್ಲಿ ಹಣ್ಣಾದವರು' - ಕೃಷಿಗಾಗಿ ಜೀವನ ಮುಡುಪಿಟ್ಟವರ ಕಥೆ. ಪ್ರತಿ ಸಂಚಿಕೆಲ್ಲಿಯೂ ಅನುಭವದ ಕಟ್ಟು ಬಿಚ್ಚಿಡುವ ಕೃಷಿಕರ ಪರಿಚಯ, ಅವರ ಚಟುವಟಿಕೆ ಈ ಕಾಲಂನಲ್ಲಿ ಕಾಣಬಹುದು.

ಈ ಕಾಲಂ ನಿಮ್ಮದೂ ಹೌದು. ನೀವು ಕಂಡು ಸಂತಸಪಟ್ಟ, ಗೌರವದಿಂದ ಕಂಡ ಕೃಷಿಕರ ಏಳು ಬೀಳು, ಯಶೋಗಾಥೆ, ಪ್ರಯೋಗಗಳು ಮುಂತಾದವುಗಳನ್ನು ನಮಗೆ ಬರೆದು ಕಳುಹಿಸಬಹುದು. ಸೂಕ್ತವಾಗಿದ್ದಲ್ಲಿ ಕೃಷಿ ಸಂಪದದಲ್ಲಿ ಪ್ರಕಟಿಸಲಾಗುವುದು.

ಬರಹ ಯೂನಿಕೋಡ್ ನಲ್ಲಿರಲಿ. ಲೇಖನವನ್ನು krushi@sampada.net ವಿಳಾಸಕ್ಕೆ ಇ-ಮೇಯ್ಲ್ ಮಾಡಿ. ವಿವರಗಳಿಗೆ ಕೊನೆಯ ಪುಟ ನೋಡಿ.



CC BY SA

# ಸಾಹಿತ್ಯ ಕೃಷಿ

## ನಮ್ಮೂರಿನ ಮರಗಳ ಸರಳ ಕೈಪಿಡಿ

**‘ನಮ್ಮ ಮರಗಳು’**

**ಲೇಖಕರು:**

ಎಚ್. ಆರ್. ಕೃಷ್ಣಮೂರ್ತಿ


**ಪ್ರಕಾಶಕರು:**

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು,
ಇಂಡಿಯನ್ ಇನ ಸ್ಟಿಟ್ಯೂಟ್ ಆಫ್ ಸೈನ್ಸ
ಆವರಣ
ಬೆಂಗಳೂರು ೫೬೦೦೧೨

**ಪ್ರಕಟಣೆ:** ೧೯೯೬

**ಪುಟ:** ೧೬೮

**ಬೆಲೆ:** ರೂ.೨೫




‘ಸುಬ್ಬರಾಯರು ನಮ್ಮೂರಿನ ಹಿರಿಯರು, ಶತಾಯುಷಿಗಳು. ಅವರಿಗೆ ಈಗ ೧೦೩ ವರ್ಷ. .... ನೂರರ ಮೇಲೆ ಮೂರಾದರೂ ಲವಲವಿಕೆಯಿಂದ ಓಡಾಡಿಕೊಂಡಿರುವ ಒಂದೇ ಕಾರಣದಿಂದ ಅವರು ನಮ್ಮೂರಿನ ಆಕರ್ಷಣೆಯ ಕೇಂದ್ರ’ ಎಂದು ಆರಂಭವಾಗುತ್ತದೆ ಮೊದಲ ಅಧ್ಯಾಯ, ‘ಮರಗಳ ಒಡನಾಟ’.

ಅದರ ಎರಡನೇ ಪಾರಾದಲ್ಲೇ ಈ ಪ್ರಶ್ನೆ ಎತ್ತುತ್ತಾರೆ, ಲೇಖಕರಾದ ಎಚ್. ಆರ್. ಕೃಷ್ಣಮೂರ್ತಿಯವರು, ‘ನೂರು ವಸಂತಗಳನ್ನು ಕಂಡ ಸುಬ್ಬರಾಯರೇ ಇಂತಹ ಆಕರ್ಷಣೆಯ ಕೇಂದ್ರವಾದರೆ, ನೂರಾರು ಸಾವಿರಾರು ವರ್ಷಗಳಾದರೂ ಆರೋಗ್ಯಪೂರ್ಣವಾಗಿ ಬದುಕುತ್ತಿರುವ ಜೀವಿಗಳನ್ನು ನಾವು ಹೇಗೆ ಕಾಣಬೇಕು ? ‘ಎಲ್ಲಿವೆ ಅಂಥ ಜೀವಿಗಳು ?’ ಎಂಬ ಪ್ರಶ್ನೆಗೆ ಉತ್ತರವಾಗಿ ಸಾವಿರಾರು ವರುಷ ಬದುಕಿರುವ ಮರಗಳನ್ನು ಉದಾಹರಿಸುತ್ತಾರೆ: (೧) ಡೆಹ್ರಾಡೂನಿನ ಅರಣ್ಯ ಸಂಶೋಧನಾ ಸಂಸ್ಥೆಯ ಆವರಣದಲ್ಲಿರುವ ದೇವದಾರು ಮರ. ಇದು ಹುಟ್ಟಿದ್ದು ೧೨ನೆಯ ಶತಮಾನದಲ್ಲಿ. (೨) ಯುಎಸ ಎ ದೇಶದ ಕ್ಯಾಲಿಫೋರ್ನಿಯ ರಾಜ್ಯದ ರೆಡ ವುಡ್ ಸಿಕೋಯ ವೃಕ್ಷಗಳು. ಅವುಗಳಲ್ಲಿ ಒಂದು ವೃಕ್ಷ ಜನ್ಮ ತಾಳಿದ್ದು ಬುದ್ಧ ಹುಟ್ಟುವ ಸಾವಿರ ವರ್ಷಗಳ ಮುಂಚೆ.

‘ದೀರ್ಘಾಯುಷ್ಯವೊಂದೇ ವೃಕ್ಷ ಪ್ರಪಂಚದಲ್ಲಿನ ಏಕೈಕ ಆಶ್ಚರ್ಯದ ಸಂಗತಿಯಲ್ಲ. ಅದು ಅಚ್ಚರಿ ಹುಟ್ಟಿಸುವ ಅಸಂಖ್ಯ ವಿಷಯಗಳ ಆಗರ’ ಎನ್ನುತ್ತಾ ಅವನ್ನು ಪರಿಚಯಿಸಲು ಶುರು ಹಚ್ಚುತ್ತಾರೆ ಲೇಖಕರು, ‘ನಮ್ಮ ಮರಗಳು’ ಪುಸ್ತಕದಲ್ಲಿ.

ಬಿಳಿಗಿರಿರಂಗನ ಬೆಟ್ಟದ ಕಾಡಿನಲ್ಲಿರುವ ದೈತ್ಯಾಕಾರದ ಸಂಪಿಗೆ ಮರದ ಬುಡದಲ್ಲಿ ಕುಳಿತಿದ್ದಾಗ, ಹತ್ತು ವರ್ಷದ ಅಭಿ ಎಂಬ ಹುಡುಗ ಕೇಳುವ ಪ್ರಶ್ನೆ: ‘ಇಂತಹ ದೊಡ್ಡ ಮರದಲ್ಲಿರುವ ಅಷ್ಟೂ ಎಲೆಗಳಿಗೆ ನೀರು ಹೇಗೆ ಸರಬರಾಜಾಗುತ್ತದೆ ?’

ಈ ಪ್ರಶ್ನೆಯಿಂದಾಗಿ ಅಲ್ಲಿ ಆರಂಭವಾಯಿತು ಪ್ರಶ್ನೆಗಳ ಸುರಿಮಳೆ. ನೀರು, ಬೇರುಗಳಿಂದ ಪ್ರಾರಂಭವಾದ ಪ್ರಶ್ನೆಗಳು ಎಲೆ, ಹೂ, ಹಣ್ಣು, ಬೀಜ, ತೊಗಟೆಗಳಿಗೆಲ್ಲ ವ್ಯಾಪಿಸಿದವು. ಅವೆಲ್ಲ ಪ್ರಶ್ನೆಗಳಿಗೆ ಉತ್ತರ ರೂಪದಲ್ಲಿವೆ, ಈ ಪುಸ್ತಕದ ಅಧ್ಯಾಯಗಳು.

ಮೂರನೆಯ ಅಧ್ಯಾಯ ‘ಮರಗಳ ಗುರುತು’. ಇದು ಮರಗಳನ್ನು ಗುರುತಿಸಲಿಕ್ಕಾಗಿ ಲೈಂಗಿಕ ಹಾಗೂ ಅಲೈಂಗಿಕ ಭಾಗಗಳನ್ನು ಬಳಸಬಹುದು. ಹೂ ಮತ್ತು ಹಣ್ಣು ಲೈಂಗಿಕ ಭಾಗವಾದರ, ಎಲೆ, ಕಾಂಡ ಹಾಗೂ ತೊಗಟೆ ಅಲೈಂಗಿಕ ಭಾಗಗಳು. ಹೂ ಅಥವಾ ಹಣ್ಣು ವರ್ಷದ ಎಲ್ಲ ಋತುಗಳಲ್ಲಿ ಇರುವುದಿಲ್ಲ. ಆದ್ದರಿಂದ ಆಯಾ ಋತುವಿನಲ್ಲಿ ಎದ್ದು ಕಾಣುವ ಭಾಗಗಳನ್ನು ಅವಲಂಬಿಸಿ ಮರಗಳನ್ನು ಗುರುತಿಸಬೇಕು. ಅದಕ್ಕಾಗಿ ಎಲೆಗಳ ಆಕಾರ, ರೆಂಬೆಯಲ್ಲಿ ಎಲೆಗಳ ಜೋಡಣೆಯನ್ನು ಈ ಅಧ್ಯಾಯದಲ್ಲಿ ಸರಳವಾಗಿ ರೇಖಾಚಿತ್ರಗಳ ಮೂಲಕ ವಿವರಿಸಲಾಗಿದೆ.

ಮರ ಬೆಳೆದು ಕಾಂಡ ದಪ್ಪವಾದಂತೆ ಹೊರ ತೊಗಟೆ ಬಿರಿಯಲು ಪ್ರಾರಂಭ. ಬಿರಿದ ತೊಗಟೆಯ ವಿನ್ಯಾಸ ಅಥವಾ ತೊಗಟೆಯ ಮೇಲೆ ಕಾಣಿಸುವ ಗುರುತು ಮರದ ಗುರುತಿನ ಪಟ್ಟಿಯಾಗುತ್ತದೆ. ಉದಾಹರಣೆಗೆ ಮತ್ತಿ ಮರವನ್ನು ಮೊಸಳೆ ಚರ್ಮದ ಮರ ಎನ್ನುತ್ತಾರೆ. ಯಾಕೆಂದರೆ ಅದರ ಬಿರಿದ ತೊಗಟೆಯ ವಿನ್ಯಾಸ ಮೊಸಳೆ ಚರ್ಮವನ್ನೇ ಹೋಲುತ್ತದೆ. ಬೂರುಗದ ತೊಗಟೆಯಲ್ಲಿ ಮುಳ್ಳುಗಳಿರುತ್ತವೆ. ನೀಲಗಿರಿ ಮರದಲ್ಲಿ ತೊಗಟೆ ಉದ್ದವಾದ ಹಾಳೆಯಂತೆ ಹರಿದು ಒಳಗಿನ ನಯವಾದ ಭಾಗ ಎದ್ದು ಕಾಣುತ್ತದೆ.

ಐದನೆಯ ಅಧ್ಯಾಯ ‘ಪರಿಚಿತ ಮರಗಳು’. ಇದರಲ್ಲಿದೆ ಆಲ, ಅರಳಿ, ಹುಣಸೆ, ಬೇವು, ಹಲಸು, ಮಾವು ಮತ್ತು ನೇರಳೆ ಮರಗಳ ಪರಿಚಯ. ಇವು ನಮಗೆಲ್ಲರಿಗೂ ತಿಳಿದಿರುವ ಮರಗಳು. ಆದರೆ ಈ ಅಧ್ಯಾಯದಲ್ಲಿ ನಮಗೆ ತಿಳಿದಿರದ ಹಲವು ಸಂಗತಿಗಳಿವೆ. ಉದಾಹರಣೆಗೆ ಆಲದ ಹೂವಿನ ಪ್ರಪಂಚ. ಅದನ್ನು ಹೀಗೆ ವಿವರಿಸುತ್ತಾರೆ ಲೇಖಕರು: ‘ಆಲದ ಹೂವು ಉಳಿದವುಗಳಂತೆ ಎದ್ದು ಕಾಣುವುದಿಲ್ಲ. ಎಪ್ರಿಲ್ - ಜೂನ್ ಸುಮಾರಿಗೆ ಆಲದ ಮರ ಕಡು ಕೆಂಪು ‘ಹಣ್ಣು’ಗಳಿಂದ ತುಂಬಿ ಹೋಗುತ್ತದೆ. ಆದರೆ ಹಣ್ಣಿನಂತೆ ಕಂಡರೂ ಅವು ಹಣ್ಣಲ್ಲ. ಅವನ್ನು ‘ಫಿಗ್’ ಎನ್ನುತ್ತಾರೆ. ಅದು ಸಾವಿರಾರು ಸಣ್ಣಸಣ್ಣ ಗಂಡು ಮತ್ತು ಹೆಣ್ಣು ಹೂಗಳನ್ನು ಮುಚ್ಚಿರುವ ಮಾಂಸಲವಾದ ಬಟ್ಟಲು. ಹಾಗಾದರೆ ಈ ಹೂಗಳಲ್ಲಿ ಪರಾಗಸ್ಪರ್ಶ ಹೇಗೆ? ಅದು ಸೂಕ್ಷ್ಮವಾದ ಕಣಜ (ಕೀಟ) ಗಳಿಂದ!

ಮುಂದಿನ ಅಧ್ಯಾಯ ‘ಹೂತುಂಬಿದ ಮರಗಳು’. ಇದರಲ್ಲಿ ಕೆಂಪು ಬೂರುಗ, ಮುತ್ತುಗ, ಪಾಲಿವಾಣ, ಹಳದಿ ಗುಲ್ ಮೊಹರ್ ಮತ್ತು ಮಳೆಮರಗಳ ಪರಿಚಯ. ಚಳಿಗಾಲದಲ್ಲಿ ಎಲೆಗಳನ್ನೆಲ್ಲ ಕಳಚಿ ವಿಕಾರವಾಗಿ ಕಾಣಿಸುವ ಮುತ್ತುಗ, ಫೆಬ್ರವರಿ - ಮಾರ್ಚಿನಲ್ಲಿ ಪ್ರಜ್ವಲಿಸುವ ಕಿತ್ತಳೆ ಹೂಗಳಿಂದ ತುಂಬಿದ ಸರ್ವಾಂಗ ಸುಂದರವಾಗುವುದು ಪ್ರಕೃತಿಯ ಸೋಜಿಗ. ಹೂವಿನಿಂದ ಮುಚ್ಚಿದ ಮರವನ್ನು ದೂರದಿಂದ ನೋಡಿದಾಗ, ಇಡೀ ಮರ ಬೆಂಕಿಯಿಂದ ಉರಿಯುವ ನೋಟ. ಇಂತಹ ಅನೇಕ ಮರಗಳು ಒಟ್ಟಿಗಿದ್ದಾಗ ಕಾಡಿಗೆ ಕಾಡೇ ಹೊತ್ತಿ ಉರಿಯುವಂತೆ ಕಾಣಿಸುತ್ತದೆ. ಅದಕ್ಕೆ ಮುತ್ತುಗಕ್ಕೆ ‘ವನಜ್ವಾಲೆ’ ಅಥವಾ ‘ಫ್ಲೇಮ್ ಆಫ್ ದಿ ಫಾರೆಸ್ಟ್’ ಎಂಬ ಹೆಸರು ಎಂದು ವಿವರಿಸುತ್ತಾರೆ ಕೃಷ್ಣಮೂರ್ತಿಯವರು.


೧೭೫೭ರ್ ಪ್ಲಾಸೀ ಕದನಕ್ಕೂ ಮುತ್ತುಗದ ಮರಕ್ಕೂ ಇರುವ ಚಾರಿತ್ರಿಕ ಸಂಬಂಧವನ್ನು ತಿಳಿಸುತ್ತಾರೆ. ಮುತ್ತುಗದ ಹಿಂದಿ ಹೆಸರು ಪಲಾಸ್. ಕದನ ನಡೆದ ಹಳ್ಳಿಯ ಬಳಿ ನೂರಾರು ಪಲಾಸ್ ಮರಗಳು ಇದ್ದ ಕಾರಣ ಅದಕ್ಕೆ ‘ಪ್ಲಾಸೀ ಕದನ’ವೆಂಬ ಹೆಸರು ಬಂತು.

(೬ನೇ ಪುಟದಲ್ಲಿ ಮುಂದುವರೆದಿದೆ)



CC BY SA

# ಫೋಟೋ ಶೀರ್ಷಿಕೆ



## ಚೆಂದದ ಶೀರ್ಷಿಕೆ ಕೊಡಿ

**ಮೇಲಿನ ಚಿತ್ರಕ್ಕೆ** ಒಂದು ಚೆಂದದ ಶೀರ್ಷಿಕೆ ಕೊಡಿ. ನಮಗೆ ತಲುಪಿದ ಅತ್ಯುತ್ತಮ ಶೀರ್ಷಿಕೆಗಳನ್ನು, ಅವುಗಳನ್ನು ಕಳುಹಿಸಿದವರ ಹೆಸರುಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಶೀರ್ಷಿಕೆಗಳನ್ನು krushi@sampada.net ವಿಳಾಸಕ್ಕೆ ಕಳುಹಿಸಿಕೊಡಿ.

ಒಂದಕ್ಕಿಂತ ಹೆಚ್ಚು ಶೀರ್ಷಿಕೆಗಳನ್ನೂ ಕಳುಹಿಸಿಕೊಡಬಹುದು.

## ಕಳೆದ ತಿಂಗಳು



ಜನವರಿ ಸಂಚಿಕೆಯ ಫೋಟೋಕ್ಕೆ ಬಂದ ಒಳ್ಳೆಯ ಶೀರ್ಷಿಕೆ:

**‘ಬುಟ್ಟಿ ಹೆಣೆದಂತೆ ಬದುಕು ಹೆಣೆಯಲಾದೀತೇ?’**

ಕಳಿಸಿದವರು: **ಎಸ್. ಲೀಲಾ**

ಈ ವಾರದ ಚಿತ್ರ: ಎಚ್ ಪಿ

ಐದನೆಯ ಪುಟದಿಂದ

ಅನಂತರದ ಅಧ್ಯಾಯದಲ್ಲಿ ‘ಮನಮೋಹಕ ತರು’ಗಳ ಪರಿಚಯ. ಅವು ಗುಲ್ ಮೊಹರ್ (ಕತ್ತಿಕಾಯಿ), ಜಕರಾಂಡ, ಹೊಳೆದಾಸವಾಳ, ಕಕ್ಕೆ ಮತ್ತು ನೀರುಕಾಯಿ (ಪಿಚಕಾರಿ ಮರ, ಕಾರಂಜಿ ಮರ) ಮರಗಳು. ನಮ್ಮ ದೇಶದ ಎಲ್ಲ ನಗರಗಳ ರಸ್ತೆಗಳ ಬದಿಯಲ್ಲಿರುವ ಬೆಡಗಿನ ಮರ ಗುಲ್ ಮೊಹರ್ ನಮ್ಮ ದೇಶದ್ದಲ್ಲ, ಮಡಗಾಸ್ಕರ್‌ನಿಂದ ಬಂದದ್ದು ಎಂಬಂತಹ ಕುತೂಹಲ ಕೆರಳಿಸುವ ಮಾಹಿತಿ ಇಲ್ಲಿದೆ. ಮುಂದಿನ ಅಧ್ಯಾಯದಲ್ಲಿ ಬೆಂಗಳೂರಿನ ಲಾಲ್ ಬಾಗ್ ನ ವಿಶೇಷ ಮರಗಳ ಪರಿಚಯ: ಕಂಚುವಾಳ, ಆನೆಕಾಯಿ, ನಾಗಲಿಂಗ, ಕೃಷ್ಣನ ಬೆಣ್ಣೆಬಟ್ಟಲು ಮತ್ತು ಬೆಟ್ಟದ ಕಣಗಲು.

‘ರೈತನ ಮಿತ್ರರು’ ಒಂಭತ್ತನೆಯ ಅಧ್ಯಾಯ. ಇದರಲ್ಲಿ ಹೊಂಗೆ, ಕರಿಜಾಲಿ, ಗ್ಲಿರಿಸಿಡಿಯ, ಹಿಪ್ಪೆ ಮತ್ತು ನುಗ್ಗೆ ಮರಗಳ ಪರಿಚಯ. ಕನ್ನಡದಲ್ಲಿ ಹೆಸರೇ ಇಲ್ಲದ ಗ್ಲಿರಿಸಿಡಿಯವನ್ನು ಲೇಖಕರು ಪರಿಚಯಿಸುವ ಪರಿ ಹೀಗಿದೆ: ‘ಮಧ್ಯ ಅಮೆರಿಕಾದ ಗ್ವಾಟೆಮಾಲದಿಂದ ಸಿಲೋನ್ ಮಾರ್ಗವಾಗಿ ೧೯೩೫ರ ಸುಮಾರಿಗೆ ನಮ್ಮ ದೇಶಕ್ಕೆ ಬಂದ ಗ್ಲಿರಿಸಿಡಿಯ ಸಣ್ಣ ಮರ. ತ್ವರಿತಗತಿಯಲ್ಲಿ ಬೆಳೆಯುವ ಮರದಲ್ಲಿ ಎದುರುಬದುರು ಎಲೆಗಳ ಜೋಡಣೆ. ಅಂಡಾಕಾರದ ಬಿಡಿ ಎಲೆಗಳ ಮೇಲ್ಭಾಗ ಹಸುರು. ತಳಭಾಗ ಬಿಳಿಹಸುರು. ನಸುಗೆಂಪು ಬಣ್ಣದ ಹೂಗಳು ಚಿಕ್ಕವು. ಹಿಮ್ಮುಖವಾಗಿ ಬಾಗುವ ೨೦ ಮಿಮೀ ಉದ್ದದ ದಳಗಳಲ್ಲಿ ಎದ್ದು ಕಾಣುವ ಎರಡು ಹಾಲೆಗಳು ಮತ್ತು ಎಲೆಯ ತಳಭಾಗದಲ್ಲಿರುವ ಕಪ್ಪು ಚುಕ್ಕೆಗಳು ಮರವನ್ನು ಗುರುತಿಸಲು ಸಹಾಯಕ’.

ಕೊನೆಯ ಅಧ್ಯಾಯ, ‘ಮರ - ಸಮಗ್ರ ಅಧ್ಯಯನ’. ಮರದ ಎತ್ತರ, ನೆತ್ತಿಯ ವಿಸ್ತೀರ್ಣ, ವಯಸ್ಸು, ಮರದ ಜೀವಿಪ್ರಪಂಚ - ಇವನ್ನೆಲ್ಲ ವಿವರವಾಗಿ ಅಧ್ಯಯನ ಮಾಡುವ ಸರಳ ವಿಧಾನಗಳನ್ನು ತಿಳಿಸುವ ಅಧ್ಯಾಯ.

ಪ್ರತಿಯೊಂದು ಅಧ್ಯಾಯದಲ್ಲಿಯೂ ರೇಖಾಚಿತ್ರಗಳು - ಇವುಗಳ ಸಹಾಯದಿಂದ ಅದರಲ್ಲಿ ಪರಿಚಯಿಸಿದ ಎಲ್ಲ ಮರಗಳನ್ನು ಓದುಗರೇ ಗುರುತಿಸಲು ಸಾಧ್ಯ. ಕೊನೆಯಲ್ಲಿ, ಪುಸ್ತಕದಲ್ಲಿ ಪರಿಚಯಿಸಿದ ೫೮ ಮರಗಳ ಕನ್ನಡದ ಹೆಸರು, ಇಂಗ್ಲಿಷ್ ಹೆಸರು ಮತ್ತು ವೈಜ್ಞಾನಿಕ ನಾಮಧೇಯದ ಪಟ್ಟಿ.

ನಮ್ಮ ಮಕ್ಕಳಿಗೆ ನಮ್ಮೂರಿನ ಮರಗಳನ್ನಾದರೂ ನಾವು ಪರಿಚಯಿಸಬೇಡವೇ? ‘ನಮಗೇ ಗೊತ್ತಿಲ್ಲ’ ಎಂಬ ಕೊರಗು ಬೇಡ. ಇಲ್ಲಿದೆ ಒಂದು ಸರಳ ಕೈಪಿಡಿ. ಈ ಪುಸ್ತಕ ಕೈಗೆತ್ತಿಕೊಳ್ಳೋಣ, ನಾವೂ ಕಲಿತು, ನಮ್ಮ ಮಕ್ಕಳಿಗೂ ಮರಗಳ ಬಗ್ಗೆ ಕಲಿಸೋಣ.

**- ರಾವ್**



CC BY SA



ಚಿತ್ರ: ಶೈಲ ಮಿಗುಯೆರ್ಝ್

## ಮಳೆಮಟ್ಟ ಸೂಚಕ ಮರ ಉಂಗುರಗಳು

ಮರವೊಂದನ್ನು ಅಡ್ಡಕ್ಕೆ ಕತ್ತರಿಸಿದಾಗ, ಅದರ ಕಾಂಡದಲ್ಲಿ ಏಕಕೇಂದ್ರಿತ ಉಂಗುರಗಳು ಕಾಣಿಸುತ್ತವೆ. ಪ್ರತಿಯೊಂದು ಉಂಗುರದ ಅಗಲ ಮತ್ತು ಆಯಾ ವರುಷದ ಮಳೆಪ್ರಮಾಣದ್ದು ಸಮ ಅನುಪಾತ. ಲಕ್ನೋದ **ಬೀರಬಲ್ ಸಾಹ್ನಿ ಸಂಸ್ಥೆ** ಈ ಬಗ್ಗೆ ಅಧ್ಯಯನ ನಡೆಸಿದೆ. ಈ ವಿಜ್ಞಾನಕ್ಕೆ ಡೆಂಡ್ರೊಕ್ರಾನೊಲಜಿ ಎಂದು ಹೆಸರು. ಸಂಸ್ಥೆಯು ತೇಗ (ಸಾಗುವಾನಿ) ಮರದ ಉಂಗುರಗಳ ಮೂಲಕ ೧೮೩೫ರಿಂದ ಮಳೆ ಪ್ರಮಾಣದ ಮಾಹಿತಿ ಸಂಗ್ರಹಿಸಿದೆ. ೧೮೭೧ರಿಂದ ಭಾರತದಲ್ಲಿ ಮಳೆಪ್ರಮಾಣದ ಅಧಿಕೃತ ಮಾಹಿತಿ ಲಭ್ಯವಿರುವ ಕಾರಣ ಇವೆರಡನ್ನೂ ಹೋಲಿಸಲು ಸಾಧ್ಯವಾಗಿದೆ.

ಮಧ್ಯ ಭಾರತದ ತೇಗದ ಮರಗಳ ಬೆಳವಣಿಗೆಯು ಮಳೆ ಪ್ರಮಾಣಕ್ಕೆ ನೇರವಾಗಿ ಅನುಗುಣವಾಗಿದೆ ಎಂದು ಅಧ್ಯಯನದಿಂದ ಧೃಡ ಪಟ್ಟಿದೆ. ನೈಋುತ್ಯ ಮಳೆಮಾರುತ ನಮ್ಮ ದೇಶದ ಶೇಕಡಾ ೭೦ - ೯೦ ಮಳೆಗೆ ಆಧಾರ.

ಮುಂಗಾರು ಮತ್ತು ಬರಗಾಲದ ಸಂಬಂಧ ತಿಳಿಯಲು ಮಳೆಪ್ರಮಾಣದ ವಿಶ್ಲೇಷಣೆ ಅಗತ್ಯ. ಈಗ ಕಾಡುಗಳಲ್ಲಿ ಹಳೆಯ ತೇಗದ ಮರಗಳು ಅಪರೂಪ. ಅವನ್ನೆಲ್ಲ ಕಡಿದು ಮುಗಿಸಿದ್ದೇವೆ.

ಮಧ್ಯಪ್ರದೇಶದ ಹೊಸಂಗಾಬಾದಿನ ಕಾಡಿನಲ್ಲಿ ೯೦ ರಿಂದ ೧೬೫ ವರುಷ ಹಳೆಯ ಮರಗಳನ್ನು ಕಡಿದು ಉರುಳಿಸಲಾಗಿತ್ತು. ಅಲ್ಲಿದ್ದ ೨೨ ತೇಗದ ಮರಗಳ ಬುಡಗಳಿಂದ ಮರ ಉಂಗುರಗಳನ್ನು ಸಂಶೋಧನಾಕಾರರು ಸಂಗ್ರಹಿಸಿದರು. ಅವುಗಳ ಆಧಾರದಿಂದ ಕಡಿಮೆ ಮಳೆ ಮತ್ತು ಹೆಚ್ಚು ಮಳೆ ಬಿದ್ದ ಅವಧಿಗಳನ್ನು ಗುರುತಿಸಿದರು.

'ಅಧಿಕೃತ ದಾಖಲೆಗಳ ಪ್ರಕಾರ ಕಡಿಮೆ ಮಳೆ ಬಿದ್ದ ವರುಷಗಳಲ್ಲಿ ತೇಗದ ಮರಗಳ ಬೆಳವಣಿಗೆಯೂ ಕುಂಠಿತವಾಗಿತ್ತು' ಎನ್ನುತ್ತಾರೆ ಸಂಶೋಧನಾ ತಂಡದ ಮುಖ್ಯಸ್ಥ ಸಂತೋಷ್ ಕೆ. ಷಾ. ಈ ಮಾಹಿತಿ ಬಳಸಿ, ಒಂದು ಶತಮಾನದ ಹವಾಮಾನ ಬದಲಾವಣೆಗಳನ್ನು ಅಂದಾಜಿಸಲು ಸಾಧ್ಯ. ಬಿಳಿ ಓಕ್ ಮರಗಳ ಉಂಗುರಗಳನ್ನು ಆಧರಿಸಿ, ಉತ್ತರ ಅಮೇರಿಕದ ಪಶ್ಚಿಮ ಭಾಗದ ಹವಾಮಾನ ಬದಲಾವಣೆಗಳನ್ನು ಅಲ್ಲಿನ ಸಂಶೋಧಕರು ಗುರುತಿಸಿದ್ದರು. ಉತ್ತರ ಅಮೇರಿಕದ ಐವಾ ಮತ್ತು ಇಲಿನಾಯ್ ಪ್ರಾಂತ್ಯಗಳ ೧೯೬೮ರ ಮುಂಚಿನ ವಾರ್ಷಿಕ ಮಳೆ ಪ್ರಮಾಣಗಳನ್ನು ಅಲ್ಲಿ ವಿಶ್ಲೇಷಣೆ ಮಾಡಿದ್ದರು. ಇದೀಗ ಲಕ್ನೋ ಸಂಸ್ಥೆಯ ಅಧ್ಯಯನ ೧೩೩ ವರುಷ ಹಳೆಯ ಮಳೆಪ್ರಮಾಣಗಳಿಗೆ ಪುರಾವೆ ಒದಗಿಸಿದೆ.

- ಕೃಷ್ಣರಾವ್

ಪರಿಸರ ಅಚ್ಚರಿಗಳ ಖನಿ. ನಮಗೆ ಪರಿಚಯವಿಲ್ಲದ ಸೃಷ್ಟಿಜಗತ್ತಿನ ಹಲವು ವೈವಿಧ್ಯಗಳನ್ನು ಪರಿಚಯಿಸುವ ಪ್ರಯತ್ನ **'ಇದೇನು?'**

ಈ ಕಾಲಂ ನಿಮ್ಮದೇ. ನಿಮಗೆ ಪರಿಚಯವಾದ ಅಪರೂಪದ ಗಿಡ, ಹೂ, ಹಣ್ಣು - ಯಾವುದೇ ಆಗಿರಬಹುದು, ನಮಗೆ ಅದರ ಚಿತ್ರ ಕಳುಹಿಸಿಕೊಡಿ. (krushi@sampada.net)

ಚಿತ್ರ ತೆಗೆದವರ ಹೆಸರಿನ ಜೊತೆಗೆ ಅದನ್ನು ಪ್ರಕಟಿಸಲಾಗುವುದು.

ತೀರ ಅಪರೂಪದ ಚಿತ್ರಗಳನ್ನು ಕಳುಹಿಸಿದವರಿಗೆ ಸೂಕ್ತ ಬಹುಮಾನವೂ ಉಂಟು!

ಈ ಚಿತ್ರದಲ್ಲಿ ಕಾಣುತ್ತಿರುವುದೇನು? ನಿಮಗೆ ಗೊತ್ತಾಯಿತೆ? ತಿಳಿದರೆ ನಮಗೆ ಬರೆದು ಕಳುಹಿಸಿ. ಅಥವ ಇ-ಮೇಯ್ಲ ಮಾಡಿ. ಗೊತ್ತಾಗದಿದ್ದರೆ ಮುಂದಿನ ಸಂಚಿಕೆಯವರೆಗೆ ಕಾಯಿರಿ!



ಚಿತ್ರ: ಸುಮ

## ಇದೇನು?

ಜನವರಿ ಸಂಚಿಕೆಯ ಪ್ರಶ್ನೆಗೆ ಉತ್ತರ: **ಜುಮ್ಮಿನ ಮರದ ಮುಳ್ಳು.** ಪಶ್ಚಿಮ ಘಟ್ಟದ ಕಾಡುಗಳಲ್ಲಿ ಬೆಳೆಯುವ ಈ ಮರದ ಮುಳ್ಳುಗಳು ಇದರ ತೊಗಟೆಯಲ್ಲಿ ಉಳಿದು ಬೆಳೆಯುತ್ತವೆ. ಅವನ್ನು ಕೈಯಿಂದ ಸುಲಭವಾಗಿ ಕೀಳಬಹುದು, ಸುಮಾರು ೩೦ ವರುಷ ವಯಸ್ಸಿನ ಮರದ ಕಾಂಡದ ಕೆಳಭಾಗದ ಮುಳ್ಳುಗಳ ವ್ಯಾಸ ೨ ಇಂಚು.



ಪ್ರಶ್ನೆಗೆ ಸರಿ ಉತ್ತರ ಕಳಿಸಿದವರು: ಎ. ಆರ್. ನಂದಕಿಶೋರ್ ಮತ್ತು ಅವಿನಾಶ್ ಪದ್ಮನಾಭ.


cc BY SA

## ಕಾಯಕದಲ್ಲಿ ಹಣ್ಣಾದವರು

(ನಾಲ್ಕನೆಯ ಪುಟದಿಂದ)

ಆದರ ಇದರಿಂದ ನಮಗೇನು ಹೆಚ್ಚು ಇಳುವರಿ ಕಂಡುಬಂದಿಲ್ಲ. ಮೊದಲಿನ ಸಾವಯವ ಪದ್ಧತಿಯೊಳಗ ಬೆಳೆದಾಗ ೮ ರಿಂದ ೧೦ ಚೀಲ ಜೋಳ ಬಂದಿತ್ತು. ಈಗ ರಾಸಾಯನಿಕ ಬಳಸಿದರ ೧೦ ರಿಂದ ೧೨ ಚೀಲ ೧ ಎಕರೇಕ ಪೀಕು ಬಂದದ ಅಷ್ಟ! ಅಂತ ಡಾ.ಮಲ್ಲಣ್ಣ ಅನುಭವ ಹಂಚಿಕೊಂಡ್ರು.

ಈಗಿನ ರೈತರು ನಾವು ಶ್ರಮಜೀವಿಗಳಲ್ಲ. ಈ ಮಾತು ಹೇಳಬೇಕಾದ್ರ ದು:ಖ ಆಗ್ತದ. ಮೇಲಾಗಿ ಅಂದ ನಮ್ಮ ಅಜ್ಜ-ಮುತ್ಯಾನ ಕಾಲಕ್ಕ ಜಾನುವಾರುಗಳ ನಮ್ಮ ರೈತನ ಬೆನ್ನೆಲುಬಾಗಿದ್ದವು. ಈಗ ನಮ್ಮ ಕೃಷಿಗೆ ಯಂತ್ರಗಳ ಜೀವನಾಡಿ! ಜಾನುವಾರು ಕಟ್ಟಿದರ ಮೇಯಿಸಿಕೊಂಡು ಬರೋರು ಯಾರು? ಸಗಣಿ ಬಳೆಯೋರು ಯಾರು? ಅವಕ್ಕ ತುರುಸಿ ಮೇವು ಹಾಕೋರು ಯಾರು? ಹಂಗ.. ರೈತನ ಮಕ್ಕಳೆಲ್ಲ ಕಲಿತು, ವಿದ್ಯಾವಂತರಾಗಿ ನೌಕರಿ ಹುಡುಕೊಂಡು ಹೊರಟರು. ನಮ್ಮ ಎಲ್ಲಾ ಒಕ್ಕಲುತನದ ಮನೆಗಳೊಳಗ ಈಗ ಈ ಪರಿಸ್ಥಿತಿ ಐತಿ. ರಟ್ಟ್ಯಾಗ ಶಕ್ತಿ ಇರೋರು ಯಾರೂ ನಮ್ಮ ಮನೆಯೊಳಗ ಇಲ್ಲ. ವಯಸ್ಸಾದ ಮುದುಕ ಮಂದಿ ನೇಗಿಲ ಹಿಡಿಯೋ ಅನಿವಾರ್ಯತೆ ಸೃಷ್ಠಿ ಆಗ್ಯೆತಿ.

ಟ್ರ್ಯಾಕ್ಟರದಿಂದ ಹೊಲ ಹರಗೋದು. ರಾಸಾಯನಿಕ ಗೊಬ್ಬರ ಮಣ್ಣಿಗೆ ಸವರೋದು. ಬೇಕಾಬಿಟ್ಟಿ ಬಿತ್ತೋದು, ಬೆಳೆಯೋದು ಅಷ್ಟ! ನಿಟ್ಟುಸಿರು ಬಿಟ್ರು ಡಾ.ಮಲ್ಲಣ್ಣ.

ಡಾ.ಮಲ್ಲಣ್ಣ ಅವರ ಮುತ್ತ್ಯಾ ರಾಯಪ್ಪ ಅಂತ ಇದ್ರು. ಅವರ ಹೆಸರಿನ ಕೆರಿ 'ರಾಯಪ್ಪನ ಕೆರಿ' ಇಂದಿಗೂ ಊರ ಮಂದಿಯ ದಾಹ ತಣಿಸುವ ಕೆರಿ. ೧೯೧೩ ರೊಳಗ ಅವರು ಕೈ ಬರಹದೊಳಗ ಕೃಷಿ ಜ್ಞಾನ ಪ್ರದೀಪಿಕೆ ಪುಸ್ತಕ ಪ್ರಕಟಿಸಿದ್ರು. ಮಳೆ ನಂಬಿದ ಶುಷ್ಕಿ ಜಮೀನಿನೊಳಗ ಒಡ್ಡು, ದುಂಡಾವರ್ತಿ, ಸಮಪಾತಳಿ ಬಗ್ಗೆ ವೈಜ್ಞಾನಿಕವಾಗಿ ಮಳೆಯಿಂದ ಬಿದ್ದ ನೀರನ್ನ ಹಿಡಿದಿಟ್ಟುಕೊಂಡು ಬೆಳಿ ಪಡೆಯುವ ಬಗ್ಗೆ ಸವಿವರ ಮಾಹಿತಿ ಇದೆ.

ಅದರೊಳಗಿರುವ ಮಾಹಿತಿಯನ್ನ ಆಧರಿಸಿ ಸುಮಾರು ೨೮ ಎಕರೆ ಹೊಲದ ಮಣ್ಣ ಕಡಿದು ಸಮಪಾತಳಿ ಮಾಡಿದ್ರು ಮಲ್ಲಣ್ಣ.

ಎಕರೆಗೆ ಒಂದರಂತೆ ನಿವೇಶನ ಮಾಡಿ ಉತ್ಥಾನ ಜಮೀನಾಗಿಸಿ ಹದಗೊಳಿಸಿ ಅಲ್ಲಿ ಬಿದ್ದ ಮಳಿ ನೀರು ಮತ್ತ ಮಣ್ಣು ಹೊರಗ ಹರದ ಹೋಗಬಾರದು ಹಂಗ ತಳ ಒಡ್ಡು ಹಾಕಿ ಕ್ರಿಕೇಟ್ ಗ್ರೌಂಡ್ ತರಹ ಕಾಣುವಹಂಗ ಮಾಡೇನಿ ಅಂದ್ರು ಮಲ್ಲಣ್ಣ.

ತಮ್ಮ ಹೊಲಕ್ಕ ಉತ್ತಮ ಗೊಬ್ಬರ ೨೫ ಗಾಡಿ, ಮಧ್ಯಮ ೨೦ ಗಾಡಿ, ಕನಿಷ್ಠ ೧೫ ಗಾಡಿ ೧ ಎಕರೆಗೆ ಗೊಬ್ಬರ ಹಾಕಬೇಕು. ಎರಿ ಭೂಮಿ ಇದ್ರ ಒಮ್ಮೆ ಗೊಬ್ಬರ ಹಾಕಿದ್ರ ಕಾಲಗ್ಯೆ ಮಾಡಿಕೊಂತ ಹೋದ್ರ ೧೦-೧೨ ವರ್ಷ ಒಳ್ಳೆಯ ಪೀಕು ಬರತ್ಯೆತಿ ಅಂತ ಘನಮಠ ಶಿವಯೋಗಿಗಳು ನಮಗೆಲ್ಲ ಹೇಳಿದ್ರು.

೧೯೬೨ ರೊಳಗ ನಾವು ೧ ಎಕರೆ ಪ್ಲಾಟ್ ಗೆ ೨೫ ಗಾಡಿ ಗೊಬ್ಬರ ಹಾಕಿ, ೨ ಸಾಲು ಮಡಕಿ ಹೊಡದು, ೫ ರಿಂದ ೬ ಸಾಲು ಹರಗಿ, ೬ ರಿಂದ ೧೫ ಚೀಲ ಜೋಳ ಬೆಳದಿದ್ವಿ ಈ ಒಣ ಹೊಲದೊಳಗ ಅಂತಾರ ಮಲ್ಲಣ್ಣ. ಮುಂದ ಆಸೆ ಹುಟ್ಟಿ ಧನ್ನೂರು, ಧಮ್ಮೂರು, ರಾಮೋಟಗಿ, ಬಿಂದ್ವಾಡ, ಹಗೇದಾಳ ಊರಾಗ ಅಡ್ಡಾಡಿ ಗೊಬ್ಬರ ಶೇಖರಿಸಿ ಹೊಲಗಳಿಗೆ ಗೊಬ್ಬರ ತುಂಬಿದ್ವಿ. ೮ ಎಕರೆಗೆ ೨-೩ ಸಾಲು ಗೊಬ್ಬರ ಎಳದ್ವಿ, ಹಸುರೆಲೆ ಗೊಬ್ಬರ ಹಾಕಿದ್ವಿ, ಕುರಿ ತರಬಸೋ ಕಾಯಕ ಮಾಡಿದ್ವಿ. ಹಿಂಗ ೧೪ ಎಕರೇಕ ನಾವು ಎಷ್ಟು ಬೆಳೆದಿದ್ವಿ ಅಂದ್ರ ೧೫೦ ಚೀಲ! ೨೦ ಎಕರೇಕ ೨೦೦ ಚೀಲ, ೮ ಎಕರೆ ಪ್ಲಾಟ್ ಗೆ ೮೦ ಚೀಲ ಜೋಳ ಬಂತು. ದನ-ಕರುಗಳಿಗೆ ಗೊಬ್ಬರ ಜೊತೆಗೆ ಕಾಲಗ್ಯೆ ಎರಡೂ ನಮ್ಮ ಖುಷ್ಕಿ ಬೇಸಾದವರನ್ನ ಬದುಕಿಸ್ಯಾವು. ನೀರಾವರಿ ಹೊಲ/ತೋಟ ಇರೋರು ಉರುಳು ಹಾಕಿಕೊಳ್ಳೊ ಮಟ್ಟಕ್ಕ ಇಳಿದಾಗ ನಾವು ಭೂಮಿ ಪ್ರೀತಿಸಿ ಬದುಕಿ ತೋರಿಸಿವಿ ಇದಲ್ಲ ಮತ್ತ ಅಂತ ಸವಾಲು ಹಾಕಿದ್ರು ಮಲ್ಲಣ್ಣ. ೧೯೭೦ರಿಂದ ತಂದಿ ಶಂಕ್ರೆಪ್ಪನವರಿಗೆ ಬಲಗ್ಯೆ ಆಗಿ ಕೃಷಿ ಕಾಯಕ ನಂಬಿ ಬದಿರೋ ಮಲ್ಲಣ್ಣನಿಗೆ ಗೌರವ ಡಾಕ್ಟರೇಟ್ ಸಿಕ್ಕಿದ್ದು ಅರ್ಥಪೂರ್ಣ ಅಂತ ಅನಿಸ್ತು.

- **ಹರ್ಷ**



# ಔಷಧ ಸಸ್ಯಗಳು

## ಅಂಕೋಲೆ

Alangium decapetalum

**ಇತರ ಹೆಸರುಗಳು**

ಅಕೋಲ, ಅನೆಧೇರ, ಧೇರಿ, ಅಕೋಲ (ಹಿಂದಿ), ಅಂಕೋಲಿ, ಓಂಕ್ಲಾ (ಗುಜರಾತಿ), ಬಘಂಕುರ, ಅಂಖುರ (ಬೆಂಗಾಲಿ)

**ಅಂಕೋಲೆ** ಆಯುರ್ವೇದದ ಪ್ರಮುಖ ಗಿಡಗಳಲ್ಲಿ ಒಂದು. ಸುಮಾರು ಹತ್ತು ಮೀಟರ್ ವರೆಗೂ ಎತ್ತರ ಬೆಳೆಯುವ ಅಂಕೋಲೆಯ ಪುಟ್ಟ ಮರಗಳು ಪುಟ್ಟದಿರುವಾಗ ಪೊದೆಯಂತೆ ಹಬ್ಬಿಕೊಂಡಿರುತ್ತವೆ. ಇದರ ಬೇರಿನ ಪುಡಿ ಅಥವ ಕಷಾಯ ಹಲವು ಉಪಯೋಗಗಳಿಗೆ ಬರುತ್ತದೆ. ತುಂಬ ಕಹಿ ಇರುತ್ತದೆ. ಹಾವು ಕಚ್ಚಿದ ಸಮಯ ಮದ್ದಾಗಿ ಬಳಸುತ್ತಾರೆ.

ಔಷಧ ಸಸ್ಯಗಳ ಕುರಿತು ಮಾಹಿತಿ ಓದುಗರೊಂದಿಗೆ ನೀವೂ ಹಂಚಿಕೊಳ್ಳಬಹುದು. ಔಷಧ ಗಿಡದ ಫೋಟೋ ಇರಲೇಬೇಕೆಂದಿಲ್ಲ. ಸಾಮಾನ್ಯ ಬಳಕೆಯಲ್ಲಿ ಇರುವ ಹೆಸರೊಂದಿಗೆ ಅದರ ಉಪಯೋಗಗಳನ್ನು ನಮಗೆ ಬರೆದು ಕಳುಹಿಸಿ: krushi@sampada.net


CC BY SA

# ನಿಮಗಿದು ಗೊತ್ತೆ ?

## ಸಸ್ಯ ವಿಶೇಷ

# ಅತ್ತಿ



ಅತ್ತಿ ಹಣ್ಣು
ಚಿತ್ರ: ದಿನೇಶ್ ವಾಲ್ಕೆ

*Ficus glomerata*

## ಇದು ಕಾಯಿಯಲ್ಲ, ಗಡ್ಡೆ !

- ಚಿತ್ರ, ಲೇಖನ: ಕೃಷ್ಣ ಪ್ರಸಾದ್ ಬೊಳುಂಬು

ಅತ್ತಿ ಎಲೆಗಳ ಮೇಲೆ ಮುತ್ತು ಪೋಣಿಸಿದಂತೆ ಕಂಡು ಬರುವ ಈ ನೋಟ ಬಹಳ ಸಾಮಾನ್ಯ. ಇವುಗಳು ಬೀನ್ಸ್, ಅವರೆ ಮೊದಲಾದ ಬೀಜಗಳಂತೆ, ಕಾಯಿಗಳೋ ಎಂಬ ಭಾವನೆ ಶ್ರೀ ಸಾಮಾನ್ಯನಿಗೆ ಬರುವುದು ಸಹಜ. ಇದು ನಿಜವಾಗಿ ನೋಡಿದರೆ ಗಡ್ಡೆಗಳು. ಗೆಣಸಿನಂತಹ ಗಡ್ಡೆಗಳಲ್ಲ ! ಇದು ನಮಗೆ ನಿಮಗೆ ಚರ್ಮದಲ್ಲಿ ಬರುವಂಥಾ ಒಂಥರಾ ಎಲರ್ಜಿ! ಕೀಟಗಳ ಪ್ರಭಾವದಿಂದ ಉಂಟಾದ ಗಡ್ಡೆಗಳಂತಹ ಬೆಳವಣಿಗೆ. ಫೈಕಸ್ ಗ್ಲಾಮರೇಟ ಅಥವಾ ಅತ್ತಿ (ಕೊಂಕಣಿಯಲ್ಲಿ ರುಮ್ಡು) ಎಲೆಗಳಲ್ಲಿ ಹೆಚ್ಚಾಗಿ ಈ ರೀತಿ ಕಂಡು ಬರುತ್ತವೆ. ಕೀಟಗಳು ಎಲೆಗಳನ್ನು ಕಚ್ಚಿದಾಗ, ಅಥವ ತಾಗಿದಾಗ ಎಲೆಗಳಲ್ಲಿರುವ ಜೀವಕಣಗಳು ಪ್ರಭಾವಿತಗೊಂಡು ಗಡ್ಡೆಗಳಂತಹ ಬೆಳವಣಿಗೆಯುಂಟಾಗುತ್ತದೆ. ಈ ಗಡ್ಡೆಗಳನ್ನು ಕೀಟ ಗಡ್ಡೆಗಳು ಎಂದು ಕರೆಯುಬಹುದು. ಇದನ್ನು ತೆರೆದು ನೋಡಿದರೆ ಒಳಗೆ ಕೆಲವೊಂದು ಬಾರಿ ಕೀಟಗಳ ಲಾರ್ವಗಳು ಕಂಡು ಬರುತ್ತವೆ. ಮುತ್ತುಚಿಪ್ಪಿನಲ್ಲಿ ಮುತ್ತು ಬೆಳೆಯುವ ಪರಿಯನ್ನು ಇದಕ್ಕೆ ಹೋಲಿಸಬಹುದು. ಪ್ರಾಣಿ/ಸಸ್ಯ ಲೋಕದಲ್ಲಿ ಎಂತೆಂತಹ ವಿಶೇಷಗಳಿವೆ ಅಲ್ಲವೆ ?



ನಿಮಗಿದು ಗೊತ್ತೆ ? ಸಸ್ಯ ಪ್ರಾಣಿಗಳ ಲೋಕದ ವಿಶೇಷಗಳನ್ನು ಓದುಗರೊಂದಿಗೆ ಹಂಚಿಕೊಳ್ಳಲು ಒಂದು ಕಾಲಂ.

ಈ ಕಾಲಂಗೆ ಹೊಂದುವ ಮಾಹಿತಿ ಇದ್ದಲ್ಲಿ ಓದುಗರು krushi@sampada.net ವಿಳಾಸಕ್ಕೆ ಬರೆದು ಕಳುಹಿಸಿ ಹಂಚಿಕೊಳ್ಳಬಹುದು. ಸೂಕ್ತ ಬರಹಗಳನ್ನು ಇಲ್ಲಿ ಪ್ರಕಟಿಸಲಾಗುವುದು.


cc BY SA

# ಅಕೇಸಿಯಾ ಆಗಮನ ಪರ್ವ

## ಹುಲ್ಲಿನ ವೈರಿಗೆ ಹೊಸಮನೆ!

**ಮುಳ್ಳೇ ಹಣ್ಣು 5**

ಗೆದ್ದೆತ್ತಿನ ಬಾಲ ಹಿಡಿಯುವ ಚಾಳಿಯಂತೆ ಕರ್ನಾಟಕ ಅರಣ್ಯ ಇಲಾಖೆ ಈ ಸಸಿ ಬಹಳ ಚೆನ್ನಾಗಿ ಬೆಳೆಯುತ್ತದೆಂದು ಅಕೇಸಿಯಾಕ್ಕೆ ಶರಣಾಯಿತು.



■ ಶಿವಾನಂದ ಕಳವೆ

ಡೆಹ್ರಾಡೂನ ನಲ್ಲಿ ಅರಣ್ಯ ತರಬೇತಿ ಆರಂಭ. ಒಂದು ಮುಂಜಾನೆ ಅಧಿಕಾರಿಗಳ ಪುಟ್ಟ ತಂಡ ಅರಣ್ಯೀಕರಣದ ಕ್ಷೇತ್ರ ದರ್ಶನಕ್ಕೆ ಗುಡ್ಡ ಏರುತ್ತಿತ್ತು. ಗುಡ್ಡಗಾಡಿನ ನೆಲೆಯಲ್ಲಿ ದೇವದಾರು ಸಸ್ಯದ ನೆಡುತೋಪು ಭರ್ಜರಿ ಬೆಳೆದಿತ್ತು. ಹುಲ್ಲು ಬೆಳೆಯುತ್ತಿದ್ದ ಗುಡ್ಡಗಳಲ್ಲಿ ಈ ಸಸ್ಯ ನಾಟಿ ಬಳಿಕ ಹುಲ್ಲಿನ ಬೆಳವಣಿಗೆ ನಿಯಂತ್ರಣಕ್ಕೆ ಬಂದಿತೆಂದೂ, ಅರಣ್ಯಕ್ಕೆ ಬೆಂಕಿ ಬೀಳುವದು, ಭೂ ಸವಕಳಿ ತೀರ ಕಡಿಮೆಯಾಯಿತೆಂದು ಅಧಿಕಾರಿಗಳು ವಿವರಿಸಿದರು. ಮಾತು ಕೇಳಿದ ಕರ್ನಾಟಕದ ಇಬ್ಬರು ಹಿರಿಯ ಅರಣ್ಯಾಧಿಕಾರಿಗಳಿಗೆ ತಟ್ಟನೆ ಪಶ್ಚಿಮ ಘಟ್ಟದ ನೆನಪಾಯಿತು. ಸರಿಸುಮಾರು ೬೦ರ ದಶಕದಿಂದಲೂ ಇಲ್ಲಿನ ಗುಡ್ಡಗಳಲ್ಲಿ ಸಾಲುಧೂಪ, ಮಹಾಗನಿ ಮುಂತಾದ ಸಸಿಗಳನ್ನು ನೆಡುತ್ತಿದ್ದರು. ಸಾಗವಾನಿ,ನೀಲಗಿರಿ ಸಸ್ಯಗಳ ನೆಡುತೋಪು ಮಾತ್ರ ಯಶಸ್ವಿಯಾಗಿತ್ತು. ಮತ್ತೊಂದು ಹೊಸ ಸಸ್ಯವನ್ನು ನೆಡುತೋಪಿನಲ್ಲಿ ಗೆಲ್ಲಿಸುವದು ಹೇಗೆಂದು ಅಧಿಕಾರಿಗಳು ಹೆಣಗಾಡುತ್ತಿದ್ದರು. ಮಳೆಗಾಲದಲ್ಲಿ ಸಸಿ ನೆಟ್ಟ ಪ್ರದೇಶದಲ್ಲಿ ಭರ್ಜರಿ ಹುಲ್ಲು ಬೆಳೆಯುತ್ತಿತ್ತು. ಬೇಸಿಗೆಯಲ್ಲಿ ಕಾಡಿನ ಬೆಂಕಿ ಇಡೀ ಪ್ರದೇಶಗಳಿಗೆ ವ್ಯಾಪಿಸಿ ನಾಟಿ ಮಾಡಿದ ಸಸಿಗಳು ಉರಿಯಲ್ಲಿ ಬೇಯುತ್ತಿದ್ದವು. ಹುಲ್ಲು ಬೆಳೆಯದಂತೆ ತಡೆಯುವ ಸಸ್ಯ ಕಾಡಿನ ಬೆಂಕಿ ನಿಯಂತ್ರಣ, ಅರಣ್ಯಾಭಿವೃದ್ಧಿಯ ಪರಿಣಾಮಕಾರಿ ಅಸ್ತ್ರವಾಗುತ್ತದೆಂದು ಸಮಸ್ಯೆ ಅಧ್ಯಯನದಿಂದ ಎಲ್ಲರೂ ಲೆಕ್ಕ ಹಾಕಿದರು. ವಿದೇಶಿ ಸಸ್ಯಕ್ಕೆ ಕೀಟಬಾಧೆ ಕಡಿಮೆ, ವಾತಾವರಣಕ್ಕೆ ಹೊಂದಿಕೊಂಡು ಬೇಗ ಬೆಳೆಯುತ್ತದೆಂಬ ಸುಳಿವು ದೊರೆಯಿತು. ನೀವು ಅಕೇಸಿಯಾ ಸಸಿಯನ್ನು ಪಶ್ಚಿಮ ಘಟ್ಟದಲ್ಲಿ ಏಕೆ ನಾಟಿ ಮಾಡಿದಿರಿ? ರಾಜ್ಯದ ಹಿರಿಯ ಅರಣ್ಯ ಅಧಿಕಾರಿಯಾಗಿದ್ದ ಪ್ರವೀಣಚಂದ್ರ ಪಾಂಡೆಯವರಲ್ಲಿ ಸಲುಗೆಯಲ್ಲಿ ಒಮ್ಮೆ ಕೇಳಿದ್ದೆ. ನಮ್ಮೂರ ಗುಡ್ಡಕ್ಕೆ ವಿಲಾಯತಿ ಸಸಿ ಬಂದ ಬಗೆಯನ್ನು ಡೆಹ್ರಾಡೂನಿನ ಗುಡ್ಡದ ಕ್ಷೇತ್ರಭೇಟಿ ನೋಟದಿಂದ ವಿವರಿಸಿದ್ದರು.



ಗೆದ್ದೆತ್ತಿನ ಬಾಲ ಹಿಡಿದು

ಪಶ್ಚಿಮ ಬಂಗಾಲದಲ್ಲಿ ಮೊಟ್ಟಮೊದಲು ಕ್ರಿ,ಶ ೧೯೨೯-೩೦ರ ಸಮಯದಲ್ಲಿ ಆಸ್ಟ್ರೇಲಿಯನ್ ಮೂಲದ ಅಕೇಸಿಯಾ ಸಸ್ಯ ನಾಟಿ ಮಾಡಿದ್ದರು. ಅಕೇಸಿಯಾದ ಭಾರತ ದಂಡಯಾತ್ರೆಯ ಮೊದಲ ಘಟ್ಟ ಅದು. ಮುಂದೆ ಕ್ರಿ.ಶ. ೧೯೬೭ರಲ್ಲಿ ರಾಜ್ಯದ ಉತ್ತರ ಕನ್ನಡದ ಭಟ್ಕಳ-ಹೊನ್ನಾವರ ರಸ್ತೆಯಂಚಿನಲ್ಲಿ ಪ್ರಾಯೋಗಿಕವಾಗಿ ನಾಟಿ ಮಾಡಿದರು. ರಬ್ಬರ್ ತೋಟದಂಚಿನಲ್ಲಿ ಬೆಂಕಿ ನಿಯಂತ್ರಣಕ್ಕೆ ಅನುಕೂಲವಾಗಬಹುದೆಂದು ನಿತ್ಯಹರಿದ್ವರ್ಣ ಸಸ್ಯ ನೆಟ್ಟರು. ಈಗ ಡೆಹ್ರಾಡೂನಿನ ತರಬೇತಿ ಬಳಿಕ ಬೆಂಗಳೂರಿಗೆ ಬಂದ ಅಧಿಕಾರಿಗಳು ಹೊಸೂರಿನಲ್ಲಿ ಪ್ರಾಯೋಗಿಕ ನೆಡುತೋಪು ಆರಂಭಿಸಿದರು. ಕ್ರಿ.ಶ. ೧೯೭೪ರಲ್ಲಿ ಅಕೇಸಿಯಾ ಸೇರಿದಂತೆ ೪೦ ಜಾತಿಯ ಸಸಿಗಳನ್ನು ಆಯ್ದು ಹುಲ್ಲುಗಾವಲಿನಲ್ಲಿ ಪ್ರಯೋಗಾರ್ಥ ಬೆಳೆಸಿದರು. ಅಲ್ಲಿ ಅಕೇಸಿಯಾ, ಕ್ಯಾಸುರಿನಾ ಸಸಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಹೊಂದಿದವು. ಸಸ್ಯಗಳ ಸಮೃದ್ಧ ಬೆಳವಣಿಗೆ ನೆಡುತೋಪು ಬೆಳೆಸುವ ಇಲಾಖಾ ಆಸಕ್ತಿ ಹೆಚ್ಚಿಸಿತು. ಈ ಸಮಯಕ್ಕೆ ಅರಣ್ಯದ ನೈಸರ್ಗಿಕ ಮರಗಳನ್ನು ಬಳಸುತ್ತಿದ್ದ ಕೈಗಾರಿಕೆಗಳಿಗೆ ಬೆಳೆಸಿ-ಬಳಸುವ ಪರ್ಯಾಯ ಮಾರ್ಗ ತೋರಿಸುವ ದಾರಿಯನ್ನು ಇಲಾಖೆ ಹುಡುಕುತ್ತಿತ್ತು. ಹೀಗಾಗಿ ಪಶ್ಚಿಮ ಘಟ್ಟದ ೨೫-೩೦ ಸ್ಥಳಗಳಲ್ಲಿ ಅಕೇಸಿಯಾ ಬೆಳೆಸಿ ಫಲಿತಾಂಶ ವೀಕ್ಷಿಸಿದರು. ಉರುವಲು, ಕಾರ್ಖಾನೆಗೆ ಕಚ್ಚಾವಸ್ತು ಎಂದು ವಿವರ ಓದಿದ ಅರಣ್ಯ ಇಲಾಖೆಯಲ್ಲಿ ಮರ ಪ್ರೀತಿ ಹೆಚ್ಚಿತು.

ಕ್ರಿ.ಶ. ೧೯೮೪ರಲ್ಲಿ ವಿಶ್ವಬ್ಯಾಂಕ್ ೫೫ಕೋಟಿ ರೂಪಾಯಿಗಳನ್ನು ಕರ್ನಾಟಕದ ಅರಣ್ಯೀಕರಣಕ್ಕೆ ನೀಡಿತು. ಉರುವಲು, ಮೇವಿಗೆ ಉಪಯುಕ್ತ ಸಸಿ ಬೆಳೆಸುವದು ಯೋಜನೆಯ ಮುಖ್ಯ ಉದ್ದೇಶವೆಂದು ಘೋಷಿಸಿದ್ದರೂ ಅರಣ್ಯೀಕರಣದ ನೆರವಿನ ಹಿಂದೆ ಒಂದು ಅವ್ಯಕ್ತ ರಹಸ್ಯ ಶರತ್ತು ಇತ್ತು! ತಾನು ನೀಡುವ ಸಾಲದ ಶೇಕಡಾ ೪೦ ಭಾಗವನ್ನು ಉಷ್ಣವಲಯದ ಪ್ರದೇಶಗಳಲ್ಲಿ ಕೈಗಾರಿಕಾ ನೆಡುತೋಪು ನಿರ್ಮಾಣಕ್ಕೆ ಬಳಸಬೇಕೆಂದು ವಿಶ್ವಬ್ಯಾಂಕ್ ಕ್ರಿ.ಶ ೧೯೭೪ರಲ್ಲಿ ಸಾಲನೀತಿ ಪ್ರಕಟಿಸಿತ್ತು.



CC BY SA

# ಕೃಷಿ ಸಂಪದ

## ಈಗ ಮತ್ತಷ್ಟು ಚೆಂದ

### ಏನು ವಿಶೇಷ?

- ಸಂಪೂರ್ಣ ಯೂನಿಕೋಡ್
  - ಪಿ ಡಿ ಎಫ್ ನಲ್ಲಿ ಸರ್ಚ್ ಮಾಡಬಹುದು.
- ಸ್ವತಂತ್ರ ತಂತ್ರಾಂಶ ಬಳಕೆ
  - ಹೊಸ ಹೆಜ್ಜೆ. ತಂತ್ರಜ್ಞಾನದಲ್ಲಿ ಕನ್ನಡಕ್ಕೆ ಕೊಡುಗೆಯಾಗಬಹುದು.

### ಹಾಗೂ ಎಂದಿನಂತೆ:

- Creative Commons

ಲೈಸೆನ್ಸಿನಡಿ ಲಭ್ಯ.

‘ಕೃಷಿ ಸಂಪದ’ದ ವಿನ್ಯಾಸ ಕನ್ನಡದಲ್ಲಿ ಮೊದಲ ಬಾರಿಗೆ ಸಂಪೂರ್ಣವಾಗಿ ‘ಸ್ವತಂತ್ರ ತಂತ್ರಾಂಶ’ ಬಳಸಿ, ಕನ್ನಡ ಯೂನಿಕೋಡ್ ನಲ್ಲಿ ರೆಡಿ ಮಾಡಲಾಗಿದೆ.

ಕೃಷಿ ಸಂಪದ Creative Commons ನಲ್ಲಿ ಪ್ರಕಟವಾಗಿರುವ ಮೊದಲ ಕನ್ನಡ ಇ-ಪತ್ರಿಕೆ.

(ವಿವರಗಳಿಗೆ ಕೊನೆಯ ಪುಟ ನೋಡಿ)

ಹತ್ತನೆಯ ಪುಟದಿಂದ

ಪ್ರಕಟಿಸಿತ್ತು. ಕರ್ನಾಟಕದ ಪಶ್ಚಿಮ ಘಟ್ಟ ಅಕೇಸಿಯಾದ ಪ್ರಯೋಗ ಭೂಮಿಯಾಗಲು ಇದು ಮುಖ್ಯಕಾರಣ! ಸಾಮಾಜಿಕ ಅರಣ್ಯ ಯೋಜನೆ ಗೋಮಾಳ, ಕೆರೆದಂಡೆ, ಅರಣ್ಯ ನಶಿಸಿದ ಪ್ರದೇಶಗಳಲ್ಲಿ ನೆಡುತೋಪು ನಿರ್ಮಿಸುವಾಗ ಕೈಗಾರಿಕಾ ನೆಡುತೋಪಿಗೆ ಆದ್ಯತೆ ದೊರೆಯಿತು. ಬ್ರಿಟನ್ ನೆರವಿನ ಪಶ್ಚಿಮ ಘಟ್ಟ ಅರಣ್ಯಾಭಿವೃದ್ಧಿ ಯೋಜನೆ, ಮೈಸೂರು ಪೇಪರ್ ಮಿಲ್ಸ್, ಅರಣ್ಯ ಕೈಗಾರಿಕಾ ನಿಗಮ ಹೀಗೆ ಎಲ್ಲೆಡೆ ಅಕೇಸಿಯಾ ಅಭಿವೃದ್ಧಿಗೆ ಫರ್ಮಾನು ಹೊರಟಿತು. ಸಸಿ ನೆಡುವ ಶ್ರಮಕ್ಕೆ ಸಮಾದಾನ ಸಿಗಲು ನೆಟ್ಟ ಸಸಿಗಳು ಬೆಳೆದು ಮರವಾಗಬೇಕು. ಕ್ರಿ.ಶ. ೧೯೭೫ರ ಪೂರ್ವದ ಅರಣ್ಯ ದಾಖಲೆ ಓದಿದರೆ ಹುಲ್ಲುಗಾವಲಿನ ಅರಣ್ಯೀಕರಣದಲ್ಲಿ ಶೇಕಡಾ ೧೦ರಷ್ಟೂ ಯಶಸ್ಸು ಕಾಣುವದಿಲ್ಲ! ಅಕೇಸಿಯಾ ಈಗ ಹೊಸ ಯಶಸ್ಸು ನೀಡಿತು. ನೆಟ್ಟ ಸಸಿಗಳಲ್ಲಿ ನೂರಕ್ಕೆ ನೂರರಷ್ಟು ಬೆಳೆದವು, ಒಂದೆರಡು ವರ್ಷಗಳಲ್ಲಿ ಇಡೀ ಪ್ರದೇಶದಲ್ಲಿ ಹಸುರು ಆವರಣ ಅಭಿವೃದ್ಧಿಯಾಯಿತು. ಗೆದ್ದೆತ್ತಿನ ಬಾಲ ಹಿಡಿಯುವ ಚಾಳಿಯಂತೆ ಕರ್ನಾಟಕ ಅರಣ್ಯ ಇಲಾಖೆ ಈ ಸಸಿ ಬಹಳ ಚೆನ್ನಾಗಿ ಬೆಳೆಯುತ್ತದೆಂದು ಅಕೇಸಿಯಾಕ್ಕೆ ಶರಣಾಯಿತು. ಕಾಡಿನ ಬೆಂಕಿಯ ಸಮಸ್ಯೆ ಕಡಿಮೆಯಾಯಿತು.

ಅಕೇಸಿಯಾ ಮಲೆನಾಡಿನ ನೆಡುತೋಪಿಗೆ ಜಿಗಿದು ಈಗ ಸುಮಾರು ಮೂರು ದಶಕಗಳಾಗಿವೆ. ಉರುವಲು, ನಾಟಾ, ಫಲ್ಪ ವುಡ್, ಕೃಷಿ ಉಪಕರಣ ಸೇರಿದಂತೆ ವಿವಿಧ ರೀತಿಯಲ್ಲಿ ಮರ ಬಳಕೆಯಾಗುತ್ತಿದೆ. ತಲಕಾವೇರಿಯ ತುತ್ತ ತುದಿ, ಭಾಗಮಂಡಲದ ಬೆಟ್ಟ, ಸುಬ್ರಮ್ಹಣ್ಯದ ಕತ್ತಲು ಕಾಡು, ಯಾಣದ ನಿಸರ್ಗ ರಮ್ಯತೆ ನಡುವೆಯೂ ಅರಣ್ಯ ಇಲಾಖೆ ಅಕೇಸಿಯಾ ಆರೈಕೆಮಾಡಿದೆ. ಸಸ್ಯ ಎತ್ತಿ ಹಿಡಿದಿದೆ. ಕರಾವಳಿ ಕಲ್ಲುಗುಡ್ಡದಲ್ಲಿ ನೆಡುತೋಪಿನ ಯಶಸ್ಸು ಎಂದರೆ ಅಲ್ಲಿ ಅಕೇಸಿಯಾ ಇದೆ ಎನ್ನುವಂತಾಗಿದೆ. ಅಷ್ಟೇಕೆ ಮಲೆನಾಡಿನ ಶಾಲಾ ಮಕ್ಕಳಿಗೆ ಸಸ್ಯಗಳ ಹೆಸರು ಬರೆಯುವ ಸ್ಪರ್ಧೆ ಮಾಡಿದರೆ ಭಾಗವಹಿಸಿದ ನೂರು ಜನರಲ್ಲಿ ಪ್ರಥಮದಲ್ಲಿ ಬರೆಯುವ ಐದು ಸಸ್ಯಗಳ ಹೆಸರಿನಲ್ಲಿ ಅಕೇಸಿಯಾ ಹೆಸರು ಇದ್ದೇ ಇರುತ್ತದೆ! ಅಬ್ಬಬ್ಬಾ ಎಂದರೆ ಒಂದು ಮೀಟರ್ ಆಳಕ್ಕೆ ಮಾತ್ರ ಬೇರು ಇಳಿಸುವ ತಾಕತ್ತಿನ ಸಸ್ಯ ನಮ್ಮ ಪಶ್ಚಿಮ ಘಟ್ಟದ ಮನೆ ಮನೆಯ ಮಕ್ಕಳ ಮೆದುಳಲ್ಲಿ ಇಷ್ಟೆಲ್ಲ ಆಳಕ್ಕೆ ಬೇರಿಳಿಸಿದ್ದು ಹೇಗೆ? ಅಚ್ಚರಿ ಕಾಣುತ್ತಿದೆ. ಡೆಹ್ರಾಡೂನ್ ತರಬೇತಿ, ವಿಶ್ವಬ್ಯಾಂಕ್ ಸಾಲನೀತಿ ಹಾಗೂ ಹುಲ್ಲುಮೇಯುವ ಸಸ್ಯದ ಚಿತ್ರಗಳು ಕಣ್ಣೆದುರು ಕುಣಿಯುತ್ತವೆ.

(ಮುಳ್ಳೆ ಹಣ್ಣು ಅಂಕಣ - ೫)

# "ಬೋನಸ್ ಕೊಡ್ತೇನೆ, ಇನ್ಸೂರೆನ್ಸ್ ಮಾಡಿಸಿದ್ದೇನೆ"

"ಮುಖ್ಯವಾಗಿ ಕಾರ್ಮಿಕರನ್ನು ವಿಶ್ವಾಸಕ್ಕೆ ತಗೊಳ್ತೇನೆ. ಅವರನ್ನು ನಮ್ಮವರ ಹಾಗೆಯೇ ನೋಡಿಕೊಳ್ತೇನೆ.

**ನಿರೂಪಣೆ: ಶ್ಯಾಮ ಭಟ್** **ಬರಹ: ಅಡ್ಡೂರು**

ಕೃಷಿ ಕಾರ್ಮಿಕರ ಸಮಸ್ಯೆ ಹಂಗಾಮಿನಿಂದ ಹಂಗಾಮಿಗೆ ಬಿಗಡಾಯಿಸುತ್ತಿದೆ. ಮಡಿಕೇರಿಯ ಹತ್ತಿರದ ಕೆಲವು ಕಾಫಿ ಎಸ್ಟೇಟ ಗಳಿಗೆ ಕಾಫಿ ಕೊಯ್ಲಿಗಾಗಿ, ರೈಲು ಪ್ರಯಾಣ ವೆಚ್ಚ ತೆತ್ತು ಅಸ್ಸಾಂನಿಂದ ಕಾರ್ಮಿಕರನ್ನು ತರಿಸುತ್ತಿದ್ದಾರೆ. ಸಕಲೇಶಪುರ ಸನಿಹದ ಕೆಲವು ತೋಟಗಳಿಗೆ ಒರಿಸ್ಸಾದಿಂದ ಕೃಷಿಕಾರ್ಮಿಕರನ್ನು ತರಿಸುತ್ತಿದ್ದಾರೆ. ಮಂಗಳೂರಿನ ಬಜಪೆ ವಿಮಾನ ನಿಲ್ದಾಣದ ಹತ್ತಿರ ಜಯಪ್ರಕಾಶರ ತೆಂಗಿನ ತೋಟವಿದೆ. ಅವರು ಹೇಳುತ್ತಾರೆ, 'ನಮ್ಮ ತೆಂಗಿನ ಮರಗಳ ಕಾಯಿ ಕೊಯ್ಯಿಸದೆ ಎಷ್ಟೋ ವರುಷಗಳಾಯಿತು. ಮರ ಹತ್ತಲು ಯಾರೂ ಸಿಕ್ಕುವುದಿಲ್ಲ. ಈಗ ಮರದಿಂದ ಬಿದ್ದ ತೆಂಗಿನಕಾಯಿ ಹೆಕ್ಕುವುದು, ಅಷ್ಟೇ'.

ಇಂತಹ ಪರಿಸ್ಥಿತಿಯಲ್ಲಿ **ರಾಮಚಂದ್ರ ಭಟ್ ಕುಡೂರು** ಅವರು ಕೃಷಿಕಾರ್ಮಿಕರ ಕೊರತೆಯ ಸಮಸ್ಯೆಯನ್ನು ಹೇಗೆ ನಿಭಾಯಿಸುತ್ತಿದ್ದಾರೆ? ಎಂದು ಪ್ರಶ್ನಿಸಿದಾಗ ಕುತೂಹಲಕ ವಿಷಯಗಳನ್ನು ತಿಳಿಸಿದರು.

**ಶ್ಯಾಮ ಭಟ್:** ನೀವು ಕೈಗಾರಿಕೆಯ ಜೊತೆಗೆ ಕೃಷಿಗೆ ಇಳಿಯಬೇಕಾದ ಸನ್ನಿವೇಶ ತಿಳಿಸಿ.

**ರಾಮಚಂದ್ರ ಭಟ್:** ನನ್ನ ತಂದೆಯ ನಂತರ ತೋಟದ ಉಸ್ತುವಾರಿ ನಾನೇ ನೋಡಿಕೊಳ್ಳಬೇಕಾಯಿತು. ಕೃಷಿ ಬಿಟ್ಟು ಬಿಡುವ ಹಾಗಿಲ್ಲ. ನಮ್ಮ ಅಭಿವೃದ್ಧಿ ಏನಿದ್ದರೂ ಕೃಷಿಯಿಂದಲೇ ಎಂದು ನಂಬಿದವನು ನಾನು. ಈಗ ವಾರಾತ್ಯಂದಲ್ಲಿ ಬಂದು, ಶನಿವಾರ - ಭಾನುವಾರ ತೋಟದಲ್ಲಿದ್ದು ನೋಡಿಕೊಳ್ತಾ ಇದ್ದೇನೆ.

**ಶ್ಯಾಮ ಭಟ್:** ಕೈಗಾರಿಕಾ ಘಟಕದ ಮೇನೇಜ್ಮೆಂಟಿನ ಸೂತ್ರಗಳನ್ನು ತೋಟದ ನಿರ್ವಹಣೆಯಲ್ಲಿ ಬಳಸಿದ್ದೀರಾ?

**ರಾಮಚಂದ್ರ ಭಟ್:** ನನ್ನದು ಐ ಎಸ್ ಓ ೯೦೦೦ ಮಾನ್ಯತೆ ಪಡೆದಿರುವ ಕೈಗಾರಿಕಾ ಘಟಕ. ಅಲ್ಲಿನ ಹಲವಾರು ಸೂತ್ರಗಳನ್ನು ಇಲ್ಲಿ ಅಳವಡಿಸಿಕೊಂಡಿದ್ದೇನೆ. ಉದಾಹರಣೆಗೆ ಅಂಗಳದಲ್ಲಿರುವ ಅಡಿಕೆಯ ಲಾಟುಗಳಿಗೆ ನಂಬ್ರ ಕೊಡ್ತೇನೆ. ಅಡಿಕೆ ಸುಲಿದು ಮಾರಾಟ ಆಗುವ ವರೆಗೆ ಅದೇ ನಂಬ್ರ. ಇದರಿಂದ ಬೇರೆಬೇರೆ ಲಾಟ್ ನ ಆದಾಯ ಗೊತ್ತಾಗ್ತದೆ.

ಅದಲ್ಲದೆ, ಕಂಪ್ಯೂಟರ್ ಬಳಸಿ, ೨೦೦೨ರಿಂದ ತೋಟದ ಖರ್ಚಿನ ಲೆಕ್ಕಾಚಾರ ಮಾಡಿಸಿದ್ದೇನೆ. ಇದೆಲ್ಲ ಲೆಕ್ಕಾಚಾರ ಯಾಕೆ? ಖರ್ಚು ಹೋಗಿ ಉಳಿದ ಹಣವೆಲ್ಲ ನಮ್ಮದೇ ಅಲ್ಲವಾ? ಎಂದು ಕೆಲವರು ಹೇಳಬಹುದು. ಅದು ಹಾಗಲ್ಲ. ಅಕೌಂಟಿಂಗ್ ಮಾಡಿದ್ರೆ ಕರಾರುವಾಕ್ಕಾದ ಮಾಹಿತಿ ಸಿಗ್ತದೆ. ಖರ್ಚು ಯಾವುದಕ್ಕೆ ಹೆಚ್ಚಾಗಿದೆ? ಯಾವುದಕ್ಕೆ ಕಡಿಮೆಯಾಗಿದೆ ತಿಳೀತದೆ. ಆದಾಯದ್ದೂ ಹಾಗೆಯೇ. ವರುಷದಿಂದ ವರುಷಕ್ಕೆ ಇದರಲ್ಲಿ ಆದ ಬದಲಾವಣೆ ತಿಳೀತದೆ. ಅನಾಲಿಸಿಸ್ ಮಾಡಲಿಕ್ಕೆ ಆಗ್ತದೆ.

**ಶ್ಯಾಮ ಭಟ್:** ನಿಮ್ಮ ತೋಟದಲ್ಲಿ ಕಾರ್ಮಿಕರ ಕೊರತೆ ಇಲ್ಲವೇ?

**ರಾಮಚಂದ್ರ ಭಟ್:** ನಮ್ಮಲ್ಲಿ ಕಾರ್ಮಿಕರ ಕೊರತೆಯ ಸಮಸ್ಯೆ ಇದೆ. ಆದರೆ ಅದು ಗಂಭೀರವಾಗಿಲ್ಲ. ತೋಟದ ಕೆಲಸಕ್ಕೆ ನಮಗೆ ಯಾವುದೇ ತೊಂದರೆ ಆಗಿಲ್ಲ. ಇದಕ್ಕೆ ಮುಖ್ಯ ಕಾರಣ, ಅವರಿಗೆ ಆರ್ಥಿಕ ಭದ್ರತೆ ಒದಗಿಸಿದ್ದೇನೆ. ಉದಾಹರಣೆಗೆ ಅವರಿಗೆ ಇನ್ಸೂರೆನ್ಸ ಮಾಡಿಸಿದ್ದೇನೆ. ಅನಾರೋಗ್ಯವಾದರೆ, ಅಪಘಾತವಾದರೆ ನಮ್ಮ ಕೆಲಸಗಾರರಿಗೆ ಇನ್ಸೂರೆನ್ಸ ಸಿಗ್ತದೆ.



ಅದಲ್ಲದೆ, ಅವರಿಗೆಲ್ಲ ಬೋನಸ್ ಕೊಡ್ತೇನೆ. ಮೊದಲು ೬ ದಿನಗಳ, ಅನಂತರ ೧೦ ದಿನಗಳ, ಈ ವರುಷ ೧೨ ದಿನಗಳ ಮಜೂರಿಯನ್ನು ಬೋನಸ್ ಕೊಟ್ಟಿದ್ದೇನೆ.

ಇದಕ್ಕೆಲ್ಲ ಅವರೂ ಸ್ಪಂದಿಸುತ್ತಾರೆ. ಅವರನ್ನು ಹ್ಯೂಮನ್ ರಿಸೋರ್ಸ್ ಅಂತಲೇ ನೋಡ್ತೇನೆ. ಯಾರದೇ ಸಾಲ ಬಾಕಿ ಇದ್ರೆ, ನಾನು ಬೋನಸನ್ನು ಸಾಲಕ್ಕೆ ವಜಾ ಮಾಡೋದಿಲ್ಲ. ತಗೋ ಮಾರಾಯಾ, ನಿನ್ನ ಬೋನಸ್ ಅಂತ ಕೊಡ್ತೇನೆ. ಅವರಿಗೆ ಅಗತ್ಯಕ್ಕೆ ಸಾಲ ಕೊಡ್ತೇನೆ. ಇದೆಲ್ಲ ಅವರಿಗೂ ಅರ್ಥ ಆಗ್ತದೆ. ಮುಖ್ಯವಾಗಿ ಅವರನ್ನು ವಿಶ್ವಾಸಕ್ಕೆ ತಗೊಳ್ತೇನೆ. ಅವರನ್ನು ನಮ್ಮವರ ಹಾಗೆಯೇ ನೋಡಿಕೊಳ್ತೇನೆ.

ಇಲ್ಲಿ ಮೇಸ್ತ್ರಿ ಇದ್ದಾರೆ. ಅನುಭವಸ್ಥರು. ನಾನು ಹೇಳಿದ ಹಾಗೆ ಕೆಲಸ ಮಾಡಿಸಿಕೊಂಡು ಹೋಗ್ತಾರೆ. ಇವರೆಲ್ಲರ ಸಹಕಾರದಿಂದ ತೋಟದ ಕೆಲಸಗಳೆಲ್ಲ ನಡೀತಿವೆ. ವಾರ್ಷಿಕ ೩೫,೦೦೦ ರೂಪಾಯಿ ನಿವ್ವಳ ಲಾಭ ಸಿಗ್ತಿದೆ.

## ನೀವು ಕೇಳಿದಿರಿ

"'ಕೃಷಿ ಸಂಪದ' ಅಕ್ಷರಗಳು ಸಣ್ಣವು, ಓದಲು ತ್ರಾಸ" ಎಂದು ಬರೆದುಕಳುಹಿಸಿದಿರಿ. ನಾವು ಸ್ಪಂದಿಸಿದ್ದೇವೆ.

ಈ ಸಂಚಿಕೆಯಿಂದ ಮೊದಲುಗೊಂಡು 'ಕೃಷಿ ಸಂಪದ' ಒಂದೊಂದು ಪುಟಗಳ ಸಾಲಿನಲ್ಲಿ ನಿಮ್ಮ ಮುಂದಿದೆ. ಮುಂಚೆ ಎರಡು ಪುಟಗಳಷ್ಟು ಅಗಲ ಇತ್ತು. ಸಣ್ಣ ಸ್ಕ್ರೀನ್ ಬಳಸಿ ಓದುವ ಓದುಗರಿಗೆ ಹೊಸ ವಿನ್ಯಾಸ ಓದು ಸುಲಭವಾಗಿಸಲಿದೆ. ಹೊಸ ವಿನ್ಯಾಸ ನಿಮಗೆ ಹೇಗನ್ನಿಸಿತು?

ನಮಗೆ ಬರೆದು ಕಳುಹಿಸಿ: krushi@sampada.net

## ನೀವೂ ಬರೆದು ಕಳುಹಿಸಿ

ಕೃಷಿಕಾರ್ಮಿಕರ ಕೊರತೆಯ ಸಮಸ್ಯೆಯನ್ನು ನಿಭಾಯಿಸುತ್ತಿರುವ ನಿಮ್ಮ ಅನುಭವಗಳಿಗೆ ಸ್ವಾಗತ.

ನಿಮ್ಮ ಅನುಭವ ನಮಗೆ ಬರೆದು ಕಳುಹಿಸಿ.
- ಬರಹ ಐದುನೂರು ಪದಗಳ ಮಿತಿಯಲ್ಲಿರಲಿ.
- ಯೂನಿಕೋಡ್ (ಬರಹ ಐ ಎಮ್ ಇ ಅಥವ ನುಡಿ ಯುನಿಕೋಡ್) ಬಳಸಿ ಬರೆದುಕಳುಹಿಸಿದರೆ ಉತ್ತಮ.
- ಬರಹ ತಿಂಗಳ ಹದಿನೈದರ ಒಳಗೆ krushi@sampada.net ವಿಳಾಸಕ್ಕೆ ಕಳುಹಿಸಬೇಕು.


CC BY SA

ಕೃಷಿಮೇಳಕ್ಕೆ ಸರಿಸಾಟಿ

# ಹಳ್ಳಿ ಹಬ್ಬ

■ ನಾ ಕಾರಂತ ಪೆರಾಜೆ




**ಚಿ**ಕ್ಕಮಗಳೂರಿನ ಮೂಡಿಗೆರೆಯ ಹತ್ತಿರದ ದೇವವೃಂದದಲ್ಲಿ ಡಿಸೆಂಬರ ೨೦೦೯ರ ಕೊನೆಯಲ್ಲಿ ಹಳ್ಳಿ ಹಬ್ಬ. ಹಬ್ಬಕ್ಕೆ ಬಂದವರು ಬರೋಬ್ಬರಿ ನಾಲ್ಕು ಸಾವಿರ ಕೃಷಿಕರು! ಅಲ್ಲಿ ಐವತ್ತು ಮಳಿಗೆಗಳು. ಎಲ್ಲದರಲ್ಲಿಯೂ ಕೃಷಿ ಸಂಬಂಧಿ ಐಟಂಗಳು.

ಅಲ್ಲಿ ಬಾಳೆಹೊನ್ನೂರಿನ ಭಾಗ್ಯದೇವ್ ಅವರ ಪೋರ್ಟೆಬಲ್ ಮನೆಗಳ ಮಾದರಿಯ ಸುತ್ತಮುತ್ತ ಸಂಜೆ ತನಕವೂ ರಶ್! ಫಾರ್ಮ್ ಹೌಸ್, ಕಾರ್ಮಿಕರ ಕೊಠಡಿ, ಅತಿಥಿ ಗೃಹ, ತಾರಸಿ ಮನೆ - ಹೀಗೆ ಕಳಚಿಜೋಡಿಸಬಲ್ಲ ಮನೆಗಳು ಅವರ ಮಳಿಗೆಯಲ್ಲಿದ್ದವು. ಇತರ ಮಳಿಗೆಗಳಲ್ಲಿದ್ದ ಕಳೆಕೊಚ್ಚುವ, ಹಾಲು ಕರೆಯುವ, ನೇಜಿ ನೆಡುವ, ಕಾಫಿ ಪಲ್ಪರ್ ಯಂತ್ರಗಳು ಹಲವು ಕೃಷಿಕರನ್ನು ಸೆಳೆದಿದ್ದವು.

ಹಳ್ಳಿಹಬ್ಬದಲ್ಲಿ ಹಲವರನ್ನು ಸೆಳೆದದ್ದು ಹಳ್ಳಿತಿಂಡಿಗಳ ಮಳಿಗೆ. ಬದುಕಿನಿಂದ ಮರೆಯಾದ, ಮರೆಯಾಗುತ್ತಿರುವ ಅರುವತ್ತು ವಿಧದ ತಿಂಡಿಗಳ ಪ್ರದರ್ಶನ. ಜತೆಗೆ ಅವುಗಳ ರೆಸಿಪಿ. ಕೆಂಜಿಗೆ ಕುಡಿ ಚಟ್ನಿ, ಕುಂಬಳಕಾಯಿ ಚಟ್ನಿ, ನುಗ್ಗೆಸೊಪ್ಪಿನ ಚಟ್ನಿ, ಸುರುಳಿ ಸೊಪ್ಪಿನ ಚಟ್ನಿ, ಸಿಹಿ ಸೋರೆಕಾಯಿ ಹಲ್ವ, ಅಂಟುಸೊಪ್ಪು ಹಲ್ವ. ಹೀಗೆ ಒಂದೇ ಎರಡೇ. ಅಲ್ಲಿ ಇಷ್ಟೊಂದು ತಿಂಡಿಗಳ ಪ್ರದರ್ಶನಕ್ಕೆ ಹಂತೂರು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ ನ ನೆರವು. ಹಳ್ಳಿ ಪಾಕವನ್ನು ತಿನಿಸುಗಳಾಗಿಸಿದ್ದು - ಬಣಕಲ್ ನ ವಿಮುಕ್ತ ಗ್ರಾಮಾಭಿವೃದ್ಧಿ ಸಂಘ.

ಪಕ್ಕದ ಮಳಿಗೆಯಲ್ಲಿ ನೋಡಿ.. ಜ್ವರ-ಶೀತ ಬಂದಾಗ ತಿನ್ನುವ ಹುಡಿ. ಇದರಲ್ಲಿ ಬೇವಿನಸೊಪ್ಪು, ಹಸಿಶುಂಠಿ, ಬೆಲ್ಲ, ಚಕ್ಕೆ, ಲವಂಗ, ಜೀರಿಗೆ, ನಾಟಿ ತುಪ್ಪ, ಜೇನು, ಬೆಳ್ಳುಳ್ಳಿ ಇವೆ. ನೀವೇ ಮನೆಯಲ್ಲಿ ಮಾಡಿಕೊಳ್ಳಬಹುದು ಎನ್ನುತ್ತಾ ಕೆ.ಎಂ.ಅರುಣಾಕ್ಷಿಯವರು ಒಂಚೂರು ಹುಡಿಯನ್ನು ಅಂಗೈಗೆ ಹಾಕಿದರು.

ಮಲೆನಾಡಿನಲ್ಲಿ ಕಾಫಿ, ಅಡಿಕೆ, ತೆಂಗು, ಭತ್ತ ಎಲ್ಲದರ ಬೇಸಾಯದಲ್ಲಿಯೂ ಕಾರ್ಮಿಕರ ಕೊರತೆ. ಇದಕ್ಕೆ ಪರಿಹಾರ ಕಂಡುಹಿಡಿವ ಪ್ರಯತ್ನ ಹಳ್ಳಿಹಬ್ಬದಲ್ಲಿ ಆಗಬೇಕು ಎಂಬುದು ನಮ್ಮ ಆಶಯ ಎಂದವರು ಸಂಘಟಕರಾದ ಧಿನೇಶ ದೇವವೃಂದ. ನಗರಗಳ ಕೃಷಿಮೇಳಗಳು ಹಳ್ಳಿಗರನ್ನು ತಲಪುವುದೇ ಇಲ್ಲ. ಅದಕ್ಕಾಗಿ ಹಳ್ಳಿಹಬ್ಬ ಎಂದವರು ಇನ್ನೊಬ್ಬ ಸಂಘಟಕರಾದ ಜಯರಾಮ ದೇವವೃಂದ.

ಹಳ್ಳಿಹಬ್ಬವನ್ನು ಆಯೋಜಿಸಿದ್ದು ಕೃಷಿಕ ಪತ್ರಿಕೆ. ಕೃಷಿ ವಿಶ್ವವಿದ್ಯಾಲಯಗಳು ಮಾಡುವ ಕೃಷಿಮೇಳಗಳಿಗೆ ಸರಿಸಾಟಿಯಾಗಿ ಹಳ್ಳಿಮೂಲೆಯಲ್ಲಿಯೂ ಕೃಷಿಮೇಳ ನಡೆಸಲು ಸಾಧ್ಯ ಎಂಬುದಕ್ಕೆ ದೇವವೃಂದದ ಹಳ್ಳಿಹಬ್ಬ ಸಾಕ್ಷಿಯಾಯಿತು.

## ಚಟುವಟಿಕೆ, ಕಾರ್ಯಕ್ರಮ


ನಿಮ್ಮ ಸುತ್ತ ಮುತ್ತ ನಡೆಯುವ ಕೃಷಿ ಕುರಿತ ಚಟುವಟಿಕೆಗಳು ಹಾಗೂ ಕಾರ್ಯಕ್ರಮಗಳ ಬಗ್ಗೆ 'ಕೃಷಿ ಸಂಪದ'ಕ್ಕೆ ಬರೆದು ಕಳುಹಿಸಬಹುದು.

ಕಾರ್ಯಕ್ರಮಗಳ ವಿವರಗಳನ್ನೂ ಪ್ರಕಟಣೆಗಾಗಿ ಕಳುಹಿಸಬಹುದು.

ಯೂನಿಕೋಡ್ ಕನ್ನಡದಲ್ಲಿ krushi@sampada.net ವಿಳಾಸಕ್ಕೆ ಬರೆದು ಕಳುಹಿಸಿ.

**ವಿವರಗಳಿಗೆ ಕೊನೆಯ ಪುಟ ನೋಡಿ.**


cc BY SA




# ನರೂರಿನ ಹಕ್ಕಿಗಳು

ವಿನಾಯಕ ಭಟ್ ನರೂರಿನವರು. ಕರ್ನಾಟಕದ ಉತ್ತರಕನ್ನಡ ಜಿಲ್ಲೆಯ ಶಿರಸಿ ತಾಲೂಕಿನಲ್ಲಿದೆ ನರೂರು. ಅಲ್ಲಿ ಕಂಡು ಬರುವ ಹಕ್ಕಿಗಳನ್ನು ದಾಖಲಿಸುವ ದೊಡ್ಡ ಕೆಲಸಕ್ಕೆ ಕೈಹಾಕಿದ್ದಾರೆ ವಿನಾಯಕ ಭಟ್. ಅವರ ವಿಳಾಸ: ಇಂಚರ, ನರೂರು ಅಂಚೆ, ಶಿರಸಿ ತಾಲೂಕು, ಉ. ಕ. ೫೮೧೩೧೮.

1. ಮಿಂಚುಳ್ಳಿಗಳಲ್ಲೇ ಬಣ್ಣಬಣ್ಣದ್ದು ನೀಲಿ ಮಿಂಚುಳ್ಳಿ. ನೀರ ಮೇಲೆ ಕೆಲವೇ ಇಂಚುಗಳ ಎತ್ತರದಲ್ಲಿ ತುಂಬ ವೇಗದಲ್ಲಿ ಹಾರುತ್ತದೆ.

2. ದೇವನಕ್ಕಿ ತಾವರೆ ಹೂವುಗಳ ಮೇಲೆ ತನ್ನ ಉದ್ದನೆಯ ಕಾಲುಗಳನ್ನು ಬಳಸಿ ಓಡಾಡುವುದು ಕಾಣಬಹುದು. ನೀರಲ್ಲಿ ಬೆಳೆಯುವ ಗಿಡಗಳನ್ನು ಶುದ್ಧತೆಯೆಂದು ಸಂಪೂರ್ಣ ತೆಗೆದುಬಿಟ್ಟರೆ ಇಂತಹ ಸೊಗಸಾದ ಹಕ್ಕಿಗಳಿಗೆ ಕುತ್ತು.

3. ಕಪ್ಪು ಬಿಳಿ ಮಿಂಚುಳ್ಳಿ ನೀರ ಮೇಲೆ ಹಲವು ಅಡಿಗಳ ಎತ್ತರದಲ್ಲಿ ಮೀನು ಹಿಡಿಯಲು ಹೊಂಚುಹಾಕುತ್ತ ನಿಂತಲ್ಲೇ ನಿಂತಂತೆ ಇರಬಲ್ಲುದು.






■ ವಿನಾಯಕ ಭಟ್


cc BY SA

# ಬಿ.ಟಿ. ಬದನೆ
## ಬೇಕೆ ಬೇಡವೇ

ಬಿ.ಟಿ. ಬದನೆ ಬೇಕೇ ಬೇಕು ಎಂದು ಸಾವಿರಾರು ರೈತರು ಬೆಂಗಳೂರಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಘೋಷಣೆ ಕೂಗುತ್ತಿದ್ದರು. ಅತ್ತ ಮತ್ತೊಂದೆಡೆ ಪರಿಸರ ಸಂಘಟನೆಗಳು ಬಿ.ಟಿ.ಬದನೆ ತೊಲಗಲಿ, ಮಾನ್ಸೆಂಟ್ ಸಹವಾಸ ದೇಶ ಸರ್ವನಾಶ ಎಂದು ಘೋಷಣೆ ಕೂಗುತ್ತಾ ಸಭಾಂಗಣವನ್ನು ಪ್ರವೇಶಿಸಿದವು. ಒಂದು ಹಂತದಲ್ಲಿ ಸಣ್ಣದೊಂದು ಜಟಾಪಟಿ ನಡೆಯುತ್ತಿರುವಂತೆಯೇ ಕೇಂದ್ರ ಪರಿಸರ ಸಚಿವ ಜೈರಾಮ್ ರಮೇಶ್, ಸಭಾಂಗಣದ ವೇದಿಕೆ ಏರಿದರು. ಮೈಕ್ ಹಿಡಿದು ಮಾತು ಆರಂಭಿಸಿದರು. ಗದ್ದಲ ತಣ್ಣಗಾಯ್ತು !

ಇದು ಬೆಂಗಳೂರಿನ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ಶನಿವಾರ ನಡೆದ ಬಿ.ಟಿ.ಬದನೆ ಬೇಕೆ ಬೇಡವೆ - ಸಾರ್ವಜನಿಕ ಅಹವಾಲು ಸ್ವೀಕಾರ ಸಮಾರಂಭದ ಆರಂಭದ ದೃಶ್ಯ.

ಸಭೆಯಲ್ಲಿ ಬರೋಬ್ಬರಿ ಎರಡೂವರೆ ಸಾವಿರ ಮಂದಿ. ೩೫ಕ್ಕೂ ಹೆಚ್ಚು ರೈತಪರ ಸಂಘಟನೆಗಳು. ಅದರಲ್ಲಿ ೧೭ ಕುಲಾಂತರಿ ತಂತ್ರಜ್ಞಾನ ಪರವಿದ್ದರೆ, ೧೮ ಸಂಘಟನೆಗಳು ಕುಲಾಂತರಿ ತಂತ್ರಜ್ಞಾನ ವಿರೋಧ ವಿದ್ದವು. ಒಟ್ಟು ೨೭ ಮಂದಿ ವಿಜ್ಞಾನಿಗಳು ೧೮ ಮಂದಿ ಬಿ.ಟಿ. ಬದನೆ ವಿರೋಧಿ ಬಣವನ್ನು ಬೆಂಬಲಿಸಿದ್ದವು.

ಅಹವಾಲು ಸ್ವೀಕಾರದ ಆರಂಭದಲ್ಲೇ ಜೈರಾಮ್ ರಮೇಶ್ ಎಲ್ಲರಿಗೂ ತಮ್ಮ ತಮ್ಮ ಭಾಷೆಯಲ್ಲೇ ಮಾತನಾಡುವ ಸ್ವಾತಂತ್ರ್ಯ ಕಲ್ಪಿಸಿದರು. ಅವಶ್ಯಕತೆ ಇದ್ದರೆ ಅನುವಾದಿಸುವ ವ್ಯವಸ್ಥೆ ಮಾಡಿದರು.

ರೈತರು, ವಿಜ್ಞಾನಿಗಳು, ಗ್ರಾಹಕರು.. ಹೀಗೆ ಮೂರ್ನಾಲ್ಕು ವಿಭಾಗಗಳಲ್ಲಿ ವಿಂಗಡಿಸಿ, ಹಸಿರು, ಕೆಂಪು, ಬಿಳಿ ಕಾರ್ಡುಗಳನ್ನು ನೋಂದಣಿ ಮಾಡಿಸಲಾಗಿತ್ತು. ರೈತರಿಗೆ ಮೊದಲ ಅವಕಾಶ. ಕಾರ್ಡುಗಳ ಮೇಲಿದ್ದ ಸಂಖ್ಯೆ ಕಂಪ್ಯೂಟರಿನಲ್ಲಿ ಮೂಡಿದ ಕೂಡಲೇ ಆ ಸಂಖ್ಯೆಯ ರೈತರು ಎದ್ದು ತಮ್ಮ ಅನಿಸಿಕೆ ಹಂಚಿಕೊಳ್ಳಬೇಕು. ಅದು ಬಿ.ಟಿ. ಬದನೆ ಪರವಾಗಿರಬಹುದು, ವಿರೋಧವಾಗಿರಬಹುದು. ಒಟ್ಟಾರೆ ಪ್ರಜಾಪ್ರಭುತ್ವದ ನೆಲೆಗಟ್ಟಿನಲ್ಲಿ ಅಹವಾಲು ಸ್ವೀಕಾರ ನಡೆಯಬೇಕು ಎಂಬುದು ಸಚಿವರ ಆಶಯ.

### ರೈತರ ಅಹವಾಲಿಗೆ ಮನ್ನಣೆ

ಅಹವಾಲು ಸ್ವೀಕಾರಕ್ಕೆ ಹಸಿರು ಕಾರ್ಡ್ ಹೊಂದಿದ್ದ ರೈತರಿಗೆ ಮೊದಲ ಮಣೆ. ರೈತ ಸಂಘದ ನಾಯಕ ಕೋಡಿಹಳ್ಳಿ ಚಂದ್ರಶೇಖರ್ ಬಿ.ಟಿ.ಬದನೆಗೆ ಕೀಟ ಬಾಧೆಯಿಲ್ಲ. ಅದರೊಳಗಿರುವ ವಂಶವಾಹಿಯೇ ಹುಳವನ್ನು ನಾಶಮಾಡುತ್ತದೆ ಎನ್ನುತ್ತಾರೆ ವಿಜ್ಞಾನಿಗಳು. ಅಂದ ಮೇಲೆ ಅಂಥ ಬದನೆ ತಿಂದ ಮನುಷ್ಯ ಆರೋಗ್ಯಪೂರ್ಣವಾಗಿರಲು ಹೇಗೆ ಸಾಧ್ಯ. ಇಂಥ ವಿಷಕಾರಕ ಬದನೆ ನಮಗೆ ಬೇಡವೇ ಬೇಡ ಎಂದು ಹೇಳುವ ಮೂಲಕ ತಮ್ಮ ಮೊದಲ ಅಹವಾಲು ಮಂಡಿಸಿದರು.

ನಮ್ಮ ದೇಸಿ ಬದನೆಯಲ್ಲಿ ವೈವಿಧ್ಯವಿದೆ. ಸರ್ಕಾರ ಈಗಿರುವ ಬದನೆಗೆ ಬೆಲೆ ಕೊಟ್ಟರೆ ಬಿ.ಟಿ. ಏಕೆ, ನಮ್ಮ ತಳಿಗಳನ್ನೇ ಸಾಕಷ್ಟು ಬೆಳೆದು, ವಿಶ್ವಕ್ಕೆಲ್ಲ ಹಂಚುತ್ತೇವೆ. ಸರ್ಕಾರಕ್ಕೆ ವಿಶ್ವಾಸವಿದ್ದರೆ ಇಂಥ ಕುಲಗೆಟ್ಟ ಬದನೆಗೆ ಅನುಮತಿ ನೀಡುವ ಬದಲು ಇರುವ ಬದನೆಗೆ ಸ್ಥಿರಬೆಲೆ ಘೋಷಿಸಲಿ ಎಂದರು ರೈತ ಸಂಘದ ಪುಟ್ಟಣ್ಣಯ್ಯ.

ಒಂದೊಂದು ಆಹಾರಕ್ಕೆ ಒಂದೊಂದು ಬದನೆ ನಮ್ಮ ರಾಜ್ಯದಲ್ಲಿವೆ. ಬಿ.ಟಿ. ಬದನೆ ಬಂದರೆ ಈ ಎಲ್ಲ ವೈವಿಧ್ಯ ನಾಶವಾಗುತ್ತದೆ. ಇಷ್ಟಕ್ಕೂ ಆ ಬದನೆ ಸುರಕ್ಷಿತ ಎಂಬುದಕ್ಕೆ ಸಾಕ್ಷಿಯಿಲ್ಲ. ಹಾಗೇನಾದರೂ ಆದರೆ ಮೊದಲು ಅದನ್ನು ಸಂಶೋಧಿಸಿದವರು ತಮ್ಮ ಮಕ್ಕಳಿಗೆ ಮೊದಲು ತಿನ್ನಿಸಲಿ. ಅವರೆಲ್ಲ ಸರಿಯಾಗಿದ್ದರೆ ನಾವು ತಿನ್ನೋಣ. ಈಗಾಗಲೇ ಪ್ರಾಣಿಗಳ ಮೇಲೆ ಪ್ರಯೋಗ

## ಸಾರ್ವಜನಿಕ ಅಹವಾಲು ಸ್ವೀಕಾರ





ಮಾಡಿ ಅವುಗಳಿಗೆ ಲಿವರ್ ಕಾಯಿಲೆ ಬಂದಿರುವುದು ಸಾಬೀತಾಗಿದೆಯೆಲ್ಲಾ.

ನಮಗ್ಯಾಕೆ ತಿನ್ನಿಸುತ್ತೀರಿ ಎಂದು ಸಚಿವ ಜೈರಾಮ್ ರಮೇಶ್ ಗೆ ನೇರವಾಗಿ ಪ್ರಶ್ನೆ ಹಾಕಿದರು ಸಾವಯವ ಕೃಷಿಕ ನಾರಾಯಣ ರೆಡ್ಡಿ.

> “ಬಿಟ್ಟಿ ಕೊಟ್ಟರೂ ಬಿ.ಟಿ. ಬದನೆ ಬೇಡ.

ಒಂದು ಸಾರಿ ಬಿ.ಟಿ.ಬದನೆಗೆ ಅನುಮತಿ ಸಿಕ್ಕಿದರೆ ನಾವು ಬಹುರಾಷ್ಟ್ರೀಯ ಕಂಪೆನಿಗಳ ಗುಲಾಮರಾಗುತ್ತೇವೆ. ಮೊದಲು ಬೀಜಕ್ಕಾಗಿ ನಂತರ, ಕೀಟನಾಶಕ್ಕಾಗಿ. ಇವತ್ತು ಬಿ.ಟಿ.ಬದನೆಗೆ ಕೀಟನಾಶಕ ಸಿಂಪಡಿಸುವ ಅಗತ್ಯವಿಲ್ಲ ಎನ್ನುತ್ತಾರೆ. ಅದರೊಳಗಿರುವ ಜೀನ್ ಗಳೇ ಕೀಟವನ್ನು ಕೊಲ್ಲುತ್ತವೆ ಎಂದು ಹೇಳುತ್ತಿದ್ದಾರೆ. ಹಿಂದೆ ಹೈಬ್ರಿಡ್ ಬಂದಾಗಲೂ ಹೀಗೆ ಹೇಳಿದ್ದರು. ಆನಂತರ ಆದ ಅನಾಹುತಗಳು ನಮ್ಮ ಕಣ್ಣಮುಂದೇ ಇವೆ. ಈ ಬದನೆ ಕಥೆ ಕೂಡ ಹಾಗೆಯೇ. ಇವತ್ತು ಬೇಡ ಎನ್ನುವರು. ನಾಳೆ ಬೇಕೆ ಬೇಕು ಎಂದರೆ ಇನ್ನಷ್ಟು ಅನಾಹುತವಾಗುತ್ತದೆ. ಇಂಥವರ ಸಹವಾಸವೇ ಬೇಡ ಎನ್ನುವುದು ರೈತರ ಅಭಿಪ್ರಾಯ.

> “ಲಕ್ಷ ಲಕ್ಷಕೊಟ್ಟರೂ ನಮಗೆ ಅಲಕ್ಷ.

ಮುಳುಬಾಗಿಲಿನ ಪಾಪಮ್ಮ, ಬ್ಯಾಡಗಿಯ ಗಂಗಮ್ಮ ನಾವೆಲ್ಲ ವರ್ಷಾನುವರ್ಷಗಳಿಂದ ನಮ್ಮದೇ ಬೀಜಗಳನ್ನು ಬಿತ್ತಿ ಬೆಳೆದಿದ್ದೇವೆ. ನಾವೆಲ್ಲ ಚೆನ್ನಾಗಿ ಬದುಕಿದ್ದೇವೆ. ಇಂಥ ತಳಿಗಳನ್ನು ಬೆಳೆದು ಮುಂದಿನ ಪೀಳಿಗೆಗೆ ವಿಷ ಕೊಡಿ ಎಂದು ಹೇಳುತ್ತೀರಾ ? ಅದು ಸಾಧ್ಯವೇ ಇಲ್ಲ ಎಂದು ವಿನಯವಾಗಿ ಬಿ.ಟಿ ಬದನೆಯನ್ನು ತಳ್ಳಿ ಹಾಕಿದರು.

ಇದು ಬದುಕನ್ನು ನಿರ್ಧರಿಸುವ ಸಭೆ. ಎಲ್ಲರೂ ಬಹಳ ಗಂಭೀರವಾಗಿ ಈ ವಿಷಯವನ್ನು ಚಿಂತಿಸಿ. ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರ. ಸ್ವತಂತ್ರ ಭಾರತ. ಭೂಮಿ ನಮ್ಮದು. ಅದರಲ್ಲಿ ಯಾವ ಬೆಳೆ ಬೆಳೆಯಬೇಕೆಂದು ನಾವು ನಿರ್ಧರಿಸುತ್ತೇವೆ. ಅದಕ್ಕೆ ಸರ್ಕಾರದ್ದಾಗಲಿ, ಕಂಪೆನಿಗಳದ್ದಾಗಲಿ ರಾಯಭಾರತನ ಬೇಡ. ಅಲ್ರೀ, ನಮಗೆ ಬಿ.ಟಿ.ಬದನೆ ಬೇಕು ಅಂತ ಕಂಪೆನಿಗಾಗಲಿ, ವಿಜ್ಞಾನಿಗಳಿಗಾಗಲಿ, ಸರ್ಕಾರಕ್ಕಾಗಲಿ ಅರ್ಜಿ ಹಾಕ್ಕೊಂಡಿದ್ವಾ ? ಇಂಥದ್ದನ್ನೇ ಬೆಳೆಯಬೇಕೆಂದು ಹೇಳೋದಕ್ಕೆ ನೀವ್ಯಾರು ? ಜೀಇಎಸಿಯವರು ಅನುಮತಿ ಕೊಟ್ಟರು ಅಂತ ಬಿ.ಟಿ.ಬದನೆ ಬೆಳೆಯುವುದಕ್ಕೆ ಮುಂದಾಗಿದ್ದೀರಾ ? ಇದು ಸರಿಯಲ್ಲ. ನಾವು ಬಿ.ಟಿ.ಬದನೆ ಬರೋದಕ್ಕೆ ಬಿಡೋದಿಲ್ಲ.


cc BY SA

ಮಾನ್ಸೆಂಟೋ, ಮಹಿಕೋದಂತಹ ಕಂಪೆನಿಗಳಿಗೆ ನಮ್ಮನ್ನು ಮಾರೋದಕ್ಕೆ ಹೊರಟಿದ್ದೀ ರಲ್ಲಾ, ಯಾರು ನಿಮಗೆ ಅಧಿಕಾರ ಕೊಟ್ಟೋರು ? ಎಂದು ಏರಿದ ಧ್ವನಿಯಲ್ಲಿ ಸುನಂದ ಜಯರಾಮ್ ಪ್ರಶ್ನಿಸಿದರು.

## “ಬಿ.ಟಿ. ಬದನೆ ಆರ್ಥಿಕ ಲಾಭಕ್ಕಾಗಿ”

ಒಂದೆಡೆ ಬಿ.ಟಿ. ಬದನೆಗೆ ವಿರೋಧ ತಾರಕಕ್ಕೇರುತ್ತಿದ್ದರೆ, ಇನ್ನೊಂದು ಕಡೆಯಿಂದ ಹಾವೇರಿ, ರಾಣೆಬೆನ್ನೂರು, ಚಿತ್ರದುರ್ಗದ ಕೆಲವು ರೈತರು ಬಿ.ಟಿ. ಬೇಕೇ ಬೇಕು ಎಂದು ಒತ್ತಾಯಿಸುತ್ತಿದ್ದರು. ಹಿಂದೆ ಬಿ.ಟಿ. ಹತ್ತಿ ಬೆಳೆದು ನಮಗೆ ಸಾಕಷ್ಟು ಲಾಭವಾಗಿದೆ. ಯಾವುದೇ ರೋಗ ರುಜಿನಗಳಿಲ್ಲ. ಇಂಥ ರೈತಪರ ತಂತ್ರಜ್ಞಾನ ನಮಗೆ ಬೇಕೇ ಬೇಕು ಎನ್ನುವುದು ಅವರ ವಾದ. ಮಾಮೂಲಿ ಬದನೆಗೆ ೩೦ - ೪೦ ಕೀಟನಾಶಕ ಹೊಡೀಬೇಕು. ಬಿ.ಟಿ. ಬದನೆಗೆ ಕೀಟನಾಶಕ ಸಿಂಪಡಿಸುವ ಅವಶ್ಯಕತೆಯಿಲ್ಲ. ಕೀಟನಾಶಕ ಸಿಂಪಡಿಸುವುದರಿಂದ ಭೂಮಿಗೆ ತೊಂದರೆ. ಕೀಟನಾಶಕ ತಪ್ಪಿಸುವುದಾದರೆ ಬಿ.ಟಿ.ಯನ್ನೇಕೆ ಸ್ವೀಕರಿಸಬಾರದು ? ಎನ್ನುವುದು ಬಿ.ಟಿ.ಪರವಾಗಿರುವ ಹಾವೇರಿ ಭಾಗದ ರೈತರ ಪ್ರಶ್ನೆ. ಎಷ್ಟು ಬಾರಿ ಔಷಧ ಹೊಡೆದರೂ ಕೀಟಬಾಧೆ ಕಡಿಮೆಯಾಗುತ್ತಿಲ್ಲ. ಹೀಗಿರುವಾಗ ಬಿ.ಟಿ. ಬೆಳೆದರೆ ತಪ್ಪೇನಿದೆ. ಇದರಿಂದ ಆರ್ಥಿಕವಾಗಿಯೂ ರೈತರಿಗೆ ಲಾಭವಾಗುತ್ತದೆ. ಇದನ್ನು ಹೇಳೋದಕ್ಕೋಸ್ಕರವೇ ನಾವೆಲ್ಲ ಲಾರಿ ಹತ್ಕೊಂಡು ಅಷ್ಟು ದೂರದಿಂದ ಬಂದಿದ್ದೇವೆ. ಇದು ಬಿ.ಟಿ. ಬದನೆ ಬೇಕೆ ಬೇಕೆಂದು ಮಾತನಾಡುವ ಹಾವೇರಿ, ರಾಣೆಬೆನ್ನೂರು ಭಾಗದ ರೈತರ ನಿಲುವು.

## ವಿಜ್ಞಾನಿಗಳ ನಿಲುವಿನಲ್ಲೇ ಭಿನ್ನತೆ

ವಿಜ್ಞಾನ ಒಂದೇ. ಆದರೆ ವಿಜ್ಞಾನಿಗಳೇಕೆ ವಿಭಿನ್ನ ! ಇಂಥದ್ದೊಂದು ಪ್ರಶ್ನೆ ಅಹವಾಲು ಸ್ವೀಕಾರ ಸಮಾರಂಭದಲ್ಲಿ ಎದುರಾಗಿತ್ತು. ಬಿ.ಟಿ. ಬದನೆ ಬೇಕೆ ಬೇಡವೇ ಎಂಬ ಅನಿಸಿಕೆ ಅಭಿಪ್ರಾಯ ವ್ಯಕ್ತಪಡಿಸಲು ಸಚಿವ ರಮೇಶ್ ವಿಜ್ಞಾನಿಗಳನ್ನು ಆಹ್ವಾನಿಸಿದರು. ನಿಮ್ಮ ಮಾಹಿತಿ ಕೇವಲ ವೈಜ್ಞಾನಿಕವಾಗಿರಬೇಕು. ಅದು ಬಿಟ್ಟು ಬೇರೆ ಸಂಘಟನೆಗಳ ವಿರುದ್ಧ, ಕಂಪೆನಿಗಳ ವಿರುದ್ಧವಿರಬಾರದು ಎಂದು ಹೇಳುತ್ತಾ ವಾದ ಮಂಡನೆಗೆ ಗ್ರೀನ್ ಸಿಗ್ನಲ್ ನೀಡಿದರು.
ಬಿ.ಟಿ. ಬದನೆಯನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲೇ ಅಭಿವೃದ್ಧಿಪಡಿಸುತ್ತಿದ್ದೇವೆ. ಇಂಥ ತಂತ್ರಜ್ಞಾನದಿಂದ ರೈತರಿಗೆ ಅನುಕೂಲವಾಗಲಿದೆ. ಅಲ್ಲ, ರೈತರು ಮೊಬೈಲ್, ಟಿ.ವಿ. ಕಾರು ಎಲ್ಲ ಹೈಟೆಕ್ ತಂತ್ರಜ್ಞಾನಗಳು ಬೇಕೆನ್ನುತ್ತಾರೆ. ಹಾಗಾದರೆ ಬಿ.ಟಿ. ತಂತ್ರಜ್ಞಾನಕ್ಕೇಕೆ ವಿರೋಧ ಎಂದು ವಿಜ್ಞಾನಿ ವಾಗೀಶ್ ಬಾಬು ವಾದ ಮಂಡಿಸುತ್ತಲೇ, ಸಭೆ ರಣರಂಗವಾಗುವತ್ತ ಹೊರಟಿತು. ವೈಜ್ಞಾನಿಕ ಮಾಹಿತಿ ಬಿಟ್ಟು ರೈತರ ಬೇಕು-ಬೇಡಗಳ ಬಗ್ಗೆ ಪ್ರಶ್ನಿಸಿದ್ದಕ್ಕೆ ರೈತ ಸಂಘಟನೆಗಳು, ಸ್ವಯಂ ಸೇವಾ ಸಂಸ್ಥೆ ಕಾರ್ಯಕರ್ತರು ತೀವ್ರ ವಿರೋಧ ವ್ಯಕ್ತಪಡಿಸಿದರು. ಮಧ್ಯ ಪ್ರವೇಶಿಸಿದ ಸಚಿವರು ಆ ವಿಜ್ಞಾನಿ ಹಾಗೆ ಮಾತನಾಡಬಾರದಿತ್ತು. ಅವರ ಮಾತಿನಿಂದ ನೋವಾಗಿದ್ದರೆ ನಾನು ಬಹಿರಂಗವಾಗಿ ಕ್ಷಮೆಯಾಚಿಸುತ್ತೇನೆ ಎಂದು ಮನವಿ ಮಾಡಿದ ಮೇಲೆ ಸಭಾಂಗಣ ತುಸು ತಣ್ಣಗಾಯಿತು.
ನಂತರ ಕೃಷಿ ವಿ.ವಿ.ಯ ಉಪಕುಲಪತಿಯವರ ಸರದಿ. ಬಿ.ಟಿ.ಬದನೆ ನೂರಕ್ಕೆ ನೂರರಷ್ಟು ಕೀಟ ನಿರೋಧಕ ಶಕ್ತಿಯಿದೆ. ನಮ್ಮ ವಿವಿ.ಯಲ್ಲೇ ಪ್ರಯೋಗ ಮಾಡಿ ನೋಡಿದ್ದೇವೆ. ಧಾರವಾಡ ವಿ.ವಿ.ಯಲ್ಲೂ ಈ ಪ್ರಯೋಗವಾಗಿದೆ. ಬಿ.ಟಿ.ಬದನೆ ಮತ್ತು ದೇಸಿ ಬದನೆ ಬೆಳೆದ ಮಣ್ಣಿನ ಗುಣದಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಿಲ್ಲ. ರೈತರೊಟ್ಟಿಗೆಯೇ ಇಂಥ ಪ್ರಯೋಗಗಳು ನಡೆದಿವೆ.

## ಬಿ.ಟಿ.ಬದನೆಯನ್ನು ಬಿಲ್ ಕುಲ್ ಒಪ್ಪದ ವೈದ್ಯ ಸಮೂಹ

ಅಚ್ಚರಿಯ ಸಂಗತಿಯೆಂದರೆ, ಬಿ.ಟಿ.ಪರ ಮಾತನಾಡುವ ಬಣದಲ್ಲಿ ಬಿ.ಟಿ. ಬದನೆ ಸುರಕ್ಷಿತ ಎಂದು ಹೇಳುವ ವೈದ್ಯರಾಗಲಿ, ಆಹಾರ ತಜ್ಞರಾಗಲಿ ಕಾಣಿಸಿಕೊಳ್ಳಲಿಲ್ಲ. ಸಭೆಯಲ್ಲಿ ಭಾಗವಹಿಸಿದ್ದ ಶೇ ೯೦ರಷ್ಟು ವೈದ್ಯರು (ಆಯುರ್ವೇದ, ಯುನಾನಿ, ಅಲೋಪತಿ, ಗ್ರಾಮೀಣ ಆರೋಗ್ಯ ಸೇವಕರು, ಯೋಗ ಶಿಕ್ಷಕರು, ನ್ಯಾಚು ರೋಪತಿ) ಬಿ.ಟಿ. ಬದನೆಯನ್ನು ವಿರೋಧಿಸಿಯೇ ಮಾತನಾಡಿದರು.
ಬಿ.ಟಿ.ಬದನೆಯಲ್ಲಿ ನಂಜಿನಂಶವಿರುವುದು ಜಾಗತಿಕ ಮಟ್ಟದ ವಿಜ್ಞಾನಿಗಳು ಸಾಬೀತು ಮಾಡಿದ್ದಾರೆ. ಇಂಥ ವಿಷಕಾರಿ ಬದನೆಯನ್ನು ನಾವು ನಮ್ಮ ಪೇಷೆಂಟ ಗಳಿಗೆ ಸೇವಿಸಿ ಎಂದು ಹೇಳುವುದಾದರೂ ಹೇಗೆ. ಈ ಬಗ್ಗೆ ಸಾಕಷ್ಟು ಅಧ್ಯಯನವಾಗಬೇಕು. ಆನಂತರವಷ್ಟೇ ಆಹಾರವಾಗಿ ಸ್ವೀಕರಿಸಬೇಕು ಎನ್ನುವುದು ಡಾ.ವೆಂಕಟೇಶ್ ಅವರ ಅಭಿಪ್ರಾಯ.
ನಮ್ಮ ಆಹಾರವಾಗುವಂತದ್ದು. ಇಂಥದ್ದು ಕೇವಲ ೯೦ಗಂಟೆಯಷ್ಟೇ ಪರೀಕ್ಷೆಗೆ ಒಳಪಟ್ಟಿದೆ. ಇದನ್ನು ತಿಂದರೆ ಆರೋಗ್ಯದ ಮೇಲೆ ದುಷ್ಪರಿರಿಣಾಮ ಬೀರೋದಿಲ್ಲ ಅಂತ ಏನ್ರಿ ಖಾತರಿ ಎಂದು ಪ್ರಶ್ನಿಸಿದರು ಆಯುರ್ವೇದ ವೈದ್ಯರು.
ನಮ್ಮನ್ನೂ ನಮ್ಮ ಹಿರಿಯರಂತೆ ಸದೃಢವಾಗಿ ಬದಕಲು ಬಿಡಿ. ಏಕೆ ಗೊತ್ತಾ, ಈಗ ಬಿಡುಗಡೆಗೆ ನಿಂತಿರುವ ಬಿ.ಟಿ. ಬದನೆಯಲ್ಲಿ ನಿರ್ದಿಷ್ಟವಾದ ರೋಗ ನಿರೋಧಕ ಶಕ್ತಿಯಿದ್ದರೂ, ಜೀನ್ ವರ್ಗಾವಣೆಯಾದಾಗ ಪೌಷ್ಟಿಕಾಂಶದ ಕೊರತೆ ಇರುತ್ತದೆ. ಇಂಥ ಬದನೆ ನಮ್ಮ ದೇಶಕ್ಕೆ ಬೇಡ ಎಂದು ಮನವಿ ಮಾಡಿದ್ದು ಆಹಾರ ತಜ್ಞ ರಘು.ಇಷ್ಟೆಲ್ಲ ಚರ್ಚೆಗಳು ನಡೆಯುತ್ತಿದ್ದರೂ ಬಿ.ಟಿ.ಬದನೆ ಸುರಕ್ಷಿತ ಎಂಬ ಅಧಿಕೃತವಾಗಿ ಧ್ವನಿಯೂ ಎಲ್ಲೂ ಕೇಳಿಬರಲಿಲ್ಲ. ಕೇವಲ ಬಿ.ಟಿ. ಬದನೆ ಸಂಶೋಧನೆಯಲ್ಲಿ ತೊಡಗಿರುವ ವಿಜ್ಞಾನಿಗಳು ಮಾತ (ಇವರು ವೈದ್ಯರಲ್ಲ) ಆಗಾಗ್ಗೆ, ಸಾರ್ವಜನಿಕರಿಗೆ ಜೀವ ಭಯ ಬೇಡ. ಸಾಕಷ್ಟು ಸಂಶೋಧನೆಯಾಗಿ. ಮನುಷ್ಯನ ಆರೋಗ್ಯದ ಮೇಲೆ ಪರಿಣಾಮಬೀರುವುದಿಲ್ಲ ಎಂದು ದಾಖಲೆ ರಹಿತ ಭರವಸೆಯ ಮಾತನಾಡುತ್ತಿದ್ದರು.

ಬಿ.ಟಿ. ವಿಚಾರದಲ್ಲಿ ನಾವು ರೈತರ ಮೇಲೆ ಒತ್ತಡ ಹೇರುತ್ತಿಲ್ಲ ಎಂದು, ಧಾರವಾಡ ಕೃಷಿ ವಿವಿಯ ಕುಲಪತಿ ವಿಜಯ್ ಕುಮಾರ್ ಹಾಗೂ ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಚೆಂಗಪ್ಪ ವಾದ ಮಂಡಿಸಿದರು. ಇದನ್ನು ವಿರೋಧಿಸಿದ ಕೇರಳದ ವಿಜ್ಞಾನಿ ಡಾ.ವಿಜಯನ್ , ಬಿ.ಟಿ.ಬದನೆಗೆ ಅನುಮತಿ ನೀಡಿದರೆ ರಾಷ್ಟ್ರೀಯ ಜೀವ ವೈವಿಧ್ಯ ಕಾಯ್ದೆ ಉಲ್ಲಂಘನೆಯಾಗುತ್ತದೆ ಎಂದರು. ಬಿ.ಟಿ ತಂತ್ರಜ್ಞಾನ ಮೂಲ ವಿಜ್ಞಾನಕ್ಕೆ ವಿರುದ್ಧವಾದದು. ಪ್ರಕೃತಿಯನ್ನೇ ಕುಲಗೆಡಿಸುವ ಇಂಥ ತಂತ್ರಜ್ಞಾನಕ್ಕೆ ಮಣೆ ಏಕೆ ಎಂದು ಸಚಿವರನ್ನು ಪ್ರಶ್ನಿಸಿದರು. ಸಚಿವರೇ ನೀವು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಿ, ಈ ಬಿ.ಟಿ ತಂತ್ರಜ್ಞಾನವನ್ನು ರಾಷ್ಟ್ರೀಯ ವಿಜ್ಞಾನ ಅಕಾಡೆಮಿ ಒಪ್ಪಿದೆಯೇ ? ಬಿ.ಟಿ. ತಂತ್ರಜ್ಞಾನ ಹಂಚುತ್ತಿರುವ ಅಮೆರಿಕದಲ್ಲಿನ ವಿಜ್ಞಾನಿಗಳೇ ಇದನ್ನು ಮಾನ್ಯ ಮಾಡಿದ್ದಾರೆಯೇ ? ಬಿ.ಟಿ.ಬದನೆ ಮೊದಲ ಕುಲಾಂತರಿ ಆಹಾರ ಬೆಳೆ. ಈ ತಳಿಯನ್ನು ಭಾರತೀಯರ ಮೇಲಯೇ ಏಕೆ ಪ್ರಯೋಗ ಮಾಡುತ್ತಿದ್ದಾರೆ ? ಎಂಬ ಪ್ರಶ್ನೆಗಳನ್ನು ವಿಜಯನ್ ಸಚಿವರ ಮುಂದಿಟ್ಟರು.
ಈಗಾಗಲೇ ಬಿ.ಟಿ ಪ್ರಯೋಗಕ್ಕೆ ಬಳಸಿರುವ ಸ್ಥಳೀಯ ಬದನೆಗಳಿಗೆ ರಾಷ್ಟ್ರೀಯ ಜೀವ ವೈವಿಧ್ಯ ಮಂಡಳಿಯಿಂದ ವಿಜ್ಞಾನಿಗಳು ಅನುಮತಿ ಪಡೆದಿದ್ದಾರೆಯೇ ? ಎಂದು ಸಾವಯವ ಕೃಷಿ ಫೆಡರೇಷನ್ ಅಧ್ಯಕ್ಷ ಡಾ.ಕ್ಲಾಡ್ ಆಳ್ವಾರೀಸ್ ಸಚಿವರಿಗೆ ಪ್ರಶ್ನಿಸಿದರು.


CC BY SA

# ಬಿ.ಟಿ. ಬದನೆ
## ಬೇಕೆ ಬೇಡವೇ

ಮತ್ತೊಬ್ಬ ವಿಜ್ಞಾನಿ ಡಾ. ಶ್ರೀದೇವಿ ಬಿ.ಟಿ. ಬದನೆ ಪರೀಕ್ಷೆ ಬಗ್ಗೆ ಅನುಮಾನ ವ್ಯಕ್ತಪಡಿಸಿದರು. ಮನುಷ್ಯನ ರೋಗಕ್ಕೆ ನೀಡುವ ಔಷಧವನ್ನು ಮಾರುಕಟ್ಟೆಗೆ ಪರಿಚಯಿಸುವ ಮುನ್ನ ವರ್ಷಾನುಗಟ್ಟಲೆ ಪರೀಕ್ಷೆಗೆ ಒಳಪಡಿಸುತ್ತೇವೆ. ಬಿ.ಟಿ. ಬದನೆ ಕೇವಲ ೭೨ರಿಂದ ೯೦ ಗಂಟೆಯಷ್ಟೇ ಪರೀಕ್ಷೆಗೆ ಒಳಪಟ್ಟಿದೆ. ಒಂದು ಪಕ್ಷ ಇದನ್ನು ತಿಂದು ಹತ್ತು ವರ್ಷಗಳ ನಂತರ ಏನಾದರೂ ಸಮಸ್ಯೆಯಾದರೆ ಆಗ ನೀವೇನು(ಸರ್ಕಾರ, ವಿಜ್ಞಾನಿಗಳು) ಮಾಡುತ್ತೀರಿ? ಈ ತಳಿಗಳನ್ನು ವಾಪಾಸು ಪಡೆಯುತ್ತೀರಾ? ಎಂದು ಪ್ರಶ್ನಿಸಿದರು. ಎಲ್ಲ ಸುಳ್ಳು, ಬಿ.ಟಿ.ಬದನೆಯಿಂದ ಪರಿಸರದ ಮೇಲೆ ಯಾವ ರೀತಿಯ ಹಾನಿಯೂ ಆಗುವುದಿಲ್ಲ. ಅದನ್ನೆಲ್ಲ ಪರೀಕ್ಷೆ ಮಾಡಿಯೇ ಮಾರು ಕಟ್ಟೆಗೆ ಬಿಡಲು ತೀರ್ಮಾನಿಸಿದ್ದೇವೆ. ಸಾರ್ವಜನಿಕರು ಈ ಬಗ್ಗೆ ಆತಂಕ ಪಡಬೇಕಿಲ್ಲ ಎನ್ನುವುದು ರಾಷ್ಟ್ರೀಯ ತೋಟಗಾರಿಕಾ ಸಂಶೋಧನಾ ಮಂಡಳಿಯ ವಿಜ್ಞಾನಿಗಳ ಅಭಿಪ್ರಾಯ. ಹಾಗಾದರೆ ನೀವು ಬಿ.ಟಿ.ಬದನೆ ಸಂಶೋಧಿಸಿದ್ದೀರಾ ಎಂದು ತಕ್ಷಣ ಸಚಿವರು ವಿಜ್ಞಾನಿಗಳಿಗೆ ಪ್ರಶ್ನಿಸಿದರು. ಪ್ರತಿಕ್ರಿಯಿಸಿದ ವಿಜ್ಞಾನಿಯೊಬ್ಬರು, ಹೌದು, ನಮ್ಮ ಸಂಶೋಧನಾ ಕೇಂದ್ರದಲ್ಲಿ ಅಭಿವೃದ್ಧಿಪಡಿ ಸಿದ್ದೇವೆ ಎಂದರು. ಎಲ್ಲಿದೆ ಆ ಬದನೆ ಎಂದು ಮರು ಪ್ರಶ್ನಿಸಿದ ಸಚಿವರಿಗೆ ಅದನ್ನು ಉನ್ನತ ಮಟ್ಟದ ಪರೀಕ್ಷೆಗೆ ಒಳಪಡಿಸಿದ್ದೇವೆ. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಇಲ್ಲಿ ತಂದಿದ್ದೇನೆ ಎಂಬ ಉತ್ತರ ಲಭ್ಯವಾಯಿತು. ಕೇವಲ ಪರೀಕ್ಷೆ ಹಂತದಲ್ಲಿರುವ ಬಿ.ಟಿ.ಬದನೆಯನ್ನು ಆರೋಗ್ಯ ಸುರಕ್ಷತೆ ಬಗ್ಗೆ ಇಷ್ಟೆಲ್ಲ ನಿಖರವಾಗಿ ಹೇಗೆ ಮಾತನಾಡುತ್ತಾರೆ? ಇದೆಲ್ಲಾ ಬೋಗಸ್ ಎನ್ನಿಸುವುದಿಲ್ಲವೇ, ಇಂಥ ವಿಜ್ಞಾನವನ್ನು ಮಾನ್ಯ ಮಾಡಬಾರದು ಎಂದು ಸಂಘಟನೆಗಳು ಸಚಿವರನ್ನು ಒತ್ತಾಯಿಸಿದರು. ಬಿ.ಟಿ.ಹತ್ತಿ ಬಿಡುಗಡೆಯಾಗಿ ಹತ್ತು ವರ್ಷ ಕಳೆದಿದೆ. ಆ ಹತ್ತಿಯಿಂದ ಏನೇನು ಅನಾಹುತಗಳಾಗಿವೆ, ಯಶಸ್ಸು ಸಿಕ್ಕಿದೆ ಎಂಬ ಅಂಶಗಳನ್ನು ಪ್ರಾಮಾಣಿಕವಾಗಿ ಅಧ್ಯಯನ ಮಾಡಿ, ಸಾರ್ವಜನಿಕರ ಎದುರು ತೆರೆದಿಡಿ. ಪಾರದರ್ಶಕವಾದ ಮಾಹಿತಿಗೆ ಸಾರ್ವಜನಿಕರು ಹೇಗೆ ಸ್ಪಂದಿಸುತ್ತಾರೆ, ಸ್ವೀಕರಿಸುತ್ತಾರೋ ನೋಡಿ. ಆಮೇಲೆ ಬಿ.ಟಿ. ಬದನೆ ಬಿಡುಗಡೆ ಮಾಡಬೇಕೋ ಬೇಡವೋ ಎಂಬುದನ್ನು ಚರ್ಚಿಸೋಣ ಎಂಬುದು ಹಲವು ವಿಜ್ಞಾನಿಗಳ ಅಭಿಪ್ರಾಯ. ಕವನದ ಮೂಲಕವೇ ತಮ್ಮ ಅಭಿಪ್ರಾಯವನ್ನು ತೆರೆದಿಟ್ಟಿದ್ದು ಧಾರವಾಡ ಕೃಷಿ ವಿವಿಯ ವಿಶ್ರಾಂತ ಕುಲಪತಿ ಡಾ.ಮಹದೇವಪ್ಪ. ಕವನದಲ್ಲಿ ಬಿ.ಟಿ. ವಿರೋಧಿಸಬೇಡಿ, ತಂತ್ರಜ್ಞಾನ ದೂಷಿಸಬೇಡಿ ಎಂದು ಹೇಳಿದವರು, ಮಾತಿನಲ್ಲಿ ಮಾತ್ರ ಬಿ.ಟಿ. ಬಂದರೆ ಬೀಜಕ್ಕಾಗಿ ಪ್ರತಿ ಬಾರಿ ಕಂಪೆನಿಯ ಹಿಂದೆ ಅಲೆಯಬೇಕೆಂಬ ಊಹೆ ತಪ್ಪು. ಇದು ಕೇವಲ ಕಂಪೆನಿಯ ಸೊತ್ತು ಎನ್ನುವುದು ಶುದ್ಧ ಸುಳ್ಳು. ವಿಜ್ಞಾನಿಗಳ ಚರ್ಚೆಯ ಅಂತ್ಯದಲ್ಲಿ ಬಿ.ಟಿ.ಬದನೆ ಅಪೂರ್ಣ ಸಂಶೋಧನೆ. ಹೊಸ ತಂತ್ರಜ್ಞಾನ ಒಪ್ಪಿಕೊಳ್ಳಬೇಕು, ನಿಜ. ಆದರೆ ಅದು ಮನುಕುಲಕ್ಕೆ ಮಾರಕವಾಗಬಾರದು. ಕನಿಷ್ಠ ೩೦-೪೦ ವರ್ಷ ಸಂಶೋಧನೆ ಯಾಗದೇ ಇಷ್ಟೊಂದು ಜನರ ಮೇಲೆ ಪ್ರಯೋಗ ಮಾಡುವುದು ಅಪಾಯ ಎನ್ನುವುದು ಜೀವ ವಿಜ್ಞಾನಿ ಡಾ.ಅಪರ್ಣಾ ಅಭಿಪ್ರಾಯ.

**ರಿಟೈರ್ಡ್ ಆದ ಮೇಲೆ ಹೀಗೇಕೆ ನೀವು ?**

ವಿಜ್ಞಾನಿಗಳ ಸರದಿಯ ಚರ್ಚೆಯ ಬೆನ್ನಲ್ಲೇ ವಿಶ್ವವಿದ್ಯಾಲಯಗಳ ವಿಶ್ರಾಂತ ಉಪಕುಲಪತಿಗಳಿಗೆ ಸಚಿವ ಜೈರಾಮ್ ರಮೇಶ್ ಪ್ರಶ್ನಿಸಿದ್ದು ಹೀಗೆ. ಪತ್ರಿಕೆಯೊಂದರಲ್ಲಿ ವಿಶ್ರಾಂತ ಕುಲಪತಿ ಜಿ.ಕೆ.ವೀರೇಶ್ ಬಿ.ಟಿ. ವಿರುದ್ಧ ಮಾತನಾಡಿರುವುದನ್ನು ಉಲ್ಲೇಖಿಸಿದ ಸಚಿವರು ಈ ಪ್ರಶ್ನೆಯನ್ನು ಲಘುವಾಗಿ ಸಭೆ ಮುಂದಿಟ್ಟರು.

ತಮ್ಮ ಸಂಖ್ಯಾ ಸರದಿಯಲ್ಲಿ ನಿಂತು ಉತ್ತರಿಸಿದ ಬೆಂಗಳೂರು ಕೃಷಿ ವಿವಿಯ ವಿಶ್ರಾಂತ ಉಪಕುಲಪತಿ ಜಿ.ಕೆ.ವೀರೇಶ್, ಸರ್ಕಾರಿ ಕೆಲಸದಲ್ಲಿದ್ದಾಗ ಸರ್ಕಾರದ ಸ್ವತ್ತಾಗಿರುತ್ತೇವೆ. ಆ ಸಮಯದಲ್ಲಿ ನಮ್ಮ ಮೇಲೆ ಬಲವಂತವಾಗಿ ತಂತ್ರಜ್ಞಾನಗಳನ್ನು ಹೇರಲಾಗುತ್ತದೆ. ಇವತ್ತು ನಾವು ಸರ್ವತಂತ್ರ ಸ್ವತಂತ್ರರು. ನಮಗೆ ಸರಿ ಎನ್ನಿಸಿದ್ದನ್ನು ನಿರ್ಧಾರ ತೆಗೆದುಕೊಳ್ಳುತ್ತೇವೆ. ಹಾಗಾಗಿ ಈಗ ಬಿ.ಟಿ.ವಿರೋಧಸುತ್ತಿದ್ದೇವೆ ಎಂದು ಸಚಿವರಿಗೆ ಉತ್ತರಿಸಿದರು.

(19ನೇ ಪುಟದಲ್ಲಿ ಮುಂದುವರೆದಿದೆ)










CC BY SA

# ಎರಡೂ ಕೆಂಪು



ಯಾಣದಲ್ಲಿ ಗಿಡದ ಚಿಗುರು

## ಜೋಡಿ ಚಿತ್ರ



ಶಿರಸಿ ಶ್ರೀ ಮಾರಿಕಾಂಬಾ ದೇವಸ್ಥಾನದ ಚಿತ್ತಾರ

ಚಿತ್ರ: ಅಡ್ಡೂರು



cc BY SA

ಈ ಮಾತನ್ನು ಕೇಳುತ್ತಲೇ ವಿಜ್ಞಾನಿಗಳು ತಮ್ಮ ಸಂಶೋಧನೆಗಳನ್ನು ರೈತರೊಂದಿಗೆ ಚರ್ಚಿಸಿ. ಅವರನ್ನು ಎಜುಕೇಟ್ ಮಾಡಿ. ನಿಮ್ಮ ಹಾಗೂ ರೈತರ ನಡುವೆ ಬಹುದೊಡ್ಡ ಕಂದಕವಿದೆ. ಅದರಿಂದಲೇ ಇಂಥ ಅಪಾರ್ಥಗಳು ಹುಟ್ಟಲು ಕಾರಣವಾಗುತ್ತವೆ ಎಂದು ಸಚಿವರು ವಿಜ್ಞಾನಿಗಳಿಗೆ ಸಲಹೆ ನೀಡಿದರು.

**ಮಾನ್ಸೆಂಟೋದ ಮಾಜಿಯೂ ಬಿ.ಟಿ.ಗೆ ವಿರೋಧ**

ವಿಜ್ಞಾನಿಗಳ ವಾದ ಮಂಡಿಸುವಾಗ ಮತ್ತೊಂದು ಅಚ್ಚರಿಯ ಜನನ. ಮಾನ್ಸೆಂಟೋ ಕಂಪೆನಿಯಲ್ಲಿ ಹತ್ತಾರು ವರ್ಷ ವ್ಯವಸ್ಥಾಪ ನಿರ್ದೇಶಕ ಹುದ್ದೆಯಲ್ಲಿದ್ದು ನಿವೃತ್ತರಾಗಿರುವ ವಿಜ್ಞಾನಿ ಡಾ.ಜಗದೀಶನ್, ಸಭೆಯಲ್ಲಿ ಆ ಕಂಪೆನಿಯು ಕೃಷಿ ಕ್ಷೇತ್ರದಲ್ಲಿ ಗಳಿಸಿರುವ ಕುಖ್ಯಾತಿಯನ್ನು ಬಿಚ್ಚಿಟ್ಟರು. ಕಂಪೆನಿ ನೀಡುವ ಸುಳ್ಳು ಅಂಕಿ ಅಂಶಗಳ ಮೇಲೆ ಸರ್ಕಾರ ನಿರ್ಧಾರ ತೆಗೆದುಕೊಳ್ಳುತ್ತದೆ. ಆ ಕಂಪೆನಿ ಬಹಳ ವರ್ಷಗಳಿಂದಲೂ ಬಿತ್ತನೆ ಬೀಜದ ಹಕ್ಕಿನ ಸ್ವಾಮ್ಯ ಕಸಿದುಕೊಳ್ಳುವ ಹುನ್ನಾರ ನಡೆಸುತ್ತಾ ಬಂದಿದೆ. ಈಗಾಗಲೇ ವಿಶ್ವದಾದ್ಯಂತ ತನ್ನ ಕಬಂದ ಬಾಹುಗಳನ್ನು ಚಾಚಿರುವ ಈ ಸಂಸ್ಥೆ ೬೫ಕ್ಕೂ ಹೆಚ್ಚು ಬೀಜ ಕಂಪೆನಿಗಳಿಂದ ರಾಯಲ್ಟಿ ಪಡೆದು ಹಣ ಗಳಿಸುತ್ತಿದೆ. ನಮ್ಮ ದೇಶದ ಕೃಷಿ ವ್ಯವಸ್ಥೆ ಮೇಲೆ ಆ ಕಂಪೆನಿ ಕಣ್ಣಿಟ್ಟಿದೆ ಎಂದು ಇಡೀ ಸಭೆಯಲ್ಲಿ ಅಚ್ಚರಿ ಮೂಡಿಸಿದರು.

ದೇಶದಲ್ಲಿ ೨೪೦೦ ಬದನೆ ತಳಿಗಳಿವೆ. ೮ ಲಕ್ಷ ಟನ್ ಬದನೆ ಉತ್ಪತ್ತಿಯಾಗುತ್ತದೆ. ಅಗತ್ಯಕ್ಕಿಂತ ಹೆಚ್ಚು ಬೆಳೆದರೆ ಮಾರುವುದು ಎಲ್ಲಿಗೆ. ನಮಗೆ ಬಿ.ಟಿ.ಬದನೆ ಬೇಡವೇ ಬೇಡ. ನಾನೆಂದಿಗೂ ಬಿ.ಟಿ.ಯ ಪಕ್ಕಾ ವಿರೋಧಿ ಎಂದು ಘೋಷಿಸಿದರು.

**ಗೌಡರು ಬಂದ್ರು.. ದಾರಿ ಬಿಡಿ**

ಬಿ.ಟಿ.ಬದನೆ ಚರ್ಚೆ ತಾರರಕ್ಕೇರುತ್ತಿದ್ದಾಗಲೇ ಮಣ್ಣಿನ ಮಗ ಮಾಜಿ ಪ್ರಧಾನಿ ದೇವೇಗೌಡರು ಸಭಾಂಗಣದಲ್ಲಿ ಕಾಣಿಸಿಕೊಂಡರು. ಗೌಡರ ದಿಢೀರ್ ಆಗಮನ, ಸಭಾ ಸಂಚಲನ ಉಂಟುಮಾಡಿದ್ದಲ್ಲದೇ ಬಿ.ಟಿ. ವಿರೋಧಿ ಸಂಘಟನೆಗಳಿಗೆ ಶಕ್ತಿ ಬಂದಂತಾಯಿತು. ಕರತಾಡನದ ಮೂಲಕ ಚಪ್ಪಾಳೆ ತಟ್ಟಿ ಗೌಡರನ್ನು ಸ್ವಾಗತಿಸಿದರು. ಇಡೀ ಕಾರ್ಯಕ್ರಮ ಮುಗಿಯವವರೆಗೂ ಎಲ್ಲವನ್ನೂ ಆಲಿಸಿದ ಗೌಡರು ನಮ್ಮ ರೈತರನ್ನು ಪ್ರಯೋಗ ಪಶುವನ್ನಾಗಿ ಮಾಡಬೇಡಿ. ಸ್ಥಳೀಯ ಬದನೆಗಳನ್ನು ಉಳಿಸಿ ಎನ್ನುವ ಮೂಲಕ ಸಭೆಯಲ್ಲಿ ಬಿ.ಟಿ.ವಿರೋಧಿ ನಿಲುವು ವ್ಯಕ್ತಪಡಿಸಿದರೂ, ಅವರ ಮಾತು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಇತ್ತು. ನಂತರ ಕುರಿತು ಪ್ರಧಾನಿಯವರಿಗೆ ಪತ್ರ ಬರೆದು ನನ್ನ ಅನಿಸಿಕೆ ವ್ಯಕ್ತಪಡಿಸಿದ್ದಾಗಿ ತಿಳಿಸಿದಾಗ ಆ ಪತ್ರದ ಸಾರವನ್ನು ಕೆಲ ಮಾಧ್ಯಮಗಳಿಗೆ ಬಿಡುಗಡೆ ಮಾಡಲಾಯಿತು. ಪತ್ರದ ಪ್ರಕಾರ ಬಿ.ಟಿ.ಬದನೆ ಪ್ರಯೋಗಕ್ಕೆ ಅವಕಾಶಕೊಡಬೇಡಿ. ಸ್ಥಳೀಯ ವಾತಾವರಣಕ್ಕೇ ಒಗ್ಗಿ ಬೆಳೆಯುವ ಬೇಕಾದಷ್ಟು ಬದನೆಗಳು ನಮ್ಮಲ್ಲಿವೆ. ಅವುಗಳನ್ನು ಗ್ರಾಹಕರೂ ಒಪ್ಪಿಕೊಂಡಿದ್ದಾರೆ. ಹೀಗಿದ್ದಾಗ ಕುಲಾಂತರಿ ಬದನೆಯ ಅಗತ್ಯವೇನಿದೆ? ಎಂದು ಪ್ರಶ್ನಿಸಿದರು. ಬೇರೆ ದೇಶಗಳೆಲ್ಲ ತಿರಸ್ಕರಿಸುವ ಈ ಬಿ.ಟಿ.ಬದನೆಯ ಮೇಲೆ ನಿಷೇಧ ಹೇರಿ. ನಮ್ಮ ದೇಶದ ಆಹಾರ ಭದ್ರತೆಯ ಹಿತ ದೃಷ್ಟಿಯಿಂದ ಸೂಕ್ತ ಕ್ರಮ ಕೈಗೊಳ್ಳಿ ಎಂದು ದೇವೇಗೌಡರು ಪ್ರಧಾನಿಯವರಲ್ಲಿ ಮನವಿ ಮಾಡಿದ್ದರು.

**ಸಾಹಿತಿ ಅನಂತ ಮೂರ್ತಿ ಸಾಥ್**

ಬಿ.ಟಿ. ವಿರೋಧಿ ಬಣಕ್ಕೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ಯು.ಆರ್.ಅನಂತಮೂರ್ತಿ ಸಾಥ್ ನೀಡಿದರು. ಬೀದಿಯಲ್ಲಿ ತರಕಾರಿ ಮಾರುವವನು ಇದು ಸ್ಥಳದ ಬದನೆ ಸಾರ್ ಎನ್ನುತ್ತಾರೆ. ಈ ಮಾತಿನಲ್ಲಿ ದೇಸಿ ತಳಿಗಳ ಮಹತ್ವ ಎಂಥದ್ದು ಎಂದು ಗೊತ್ತಾಗುತ್ತದೆ. ಇಂಥ ತಳಿ ನಾಶ ಮಾಡುವ ಬಿ.ಟಿ. ಬದನೆ ನಮ್ಮ ದೇಶಕ್ಕೆ ಬೇಡ. ರೈತರು ಬಹಳ ಬುದ್ದಿವಂತರಿದ್ದಾರೆ. ಅವರಿಗೆ ಯಾವ ಬೆಳೆ ಬೆಳೆಯಬೇಕೆಂಬ ಜ್ಞಾನವಿದೆ. ಬಿ.ಟಿ. ತಂತ್ರಜ್ಞಾನದ ಹೆಸರಿನಲ್ಲಿ ಎಕ್ಸ್‌ಪರ್ಟ್‌ಗಳ (ತಜ್ಞರ ಹಿಂದೆ) ಹಿಂದೆ ರೈತರನ್ನು ಹೋಗುವಂತೆ ಮಾಡಬೇಡಿ ಎಂದು ಮನವಿ ಮಾಡಿದರು.

# ಬಿ.ಟಿ. ಬದನೆ
## ಬೇಕೆ ಬೇಡವೇ

## ೧೯೦ ತಳಿಗಳು ಜೀವವೈವಿಧ್ಯ ಕಾಯ್ದೆಯಿಂದ ಹೊರಕ್ಕೆ !

'ರಾಷ್ಟ್ರೀಯ ಜೀವ ವೈವಿಧ್ಯ ಕಾಯ್ದೆ ವ್ಯಾಪ್ತಿಯಿಂದ ೧೯೦ ತಳಿಗಳನ್ನು ಹೊರಗಿಟ್ಟು ಗೆಜೆಟ್ ನೋಟಿಫಿಕೇಷನ್ ಹೊರಡಿಸಿದ್ದೀರಿ. ಆ ಪಟ್ಟಿಯಲ್ಲಿ ಬದನೆ ಕೂಡ ಸೇರಿದೆ. ಈ ಘಟನೆ ನಡೆದು ಕೆಲವೇ ದಿನಗಳಲ್ಲಿ ಜಿ.ಇ.ಎ.ಸಿ ಸಮಿತಿ ಬಿ.ಟಿ.ಬದನೆ ಪ್ರಯೋಗಕ್ಕೆ ಒಪ್ಪಿಗೆ ನೀಡಿದೆ. ಈಗ ನೀವು ಬಿ.ಟಿ.ಬದನೆ ಬೇಕೆ ಬೇಡವೇ ಎಂದು ದೇಶಾದ್ಯಂತ ಸಾರ್ವಜನಿಕ ಅಹವಾಲು ಸ್ವೀಕಾರ ಮಾಡುತ್ತಿದ್ದೀರಿ. ಹಾಗಾದರೆ ನಿಮ್ಮ ಸರ್ಕಾರದ ನಿಲುವು ಏನು ? ಇದು ಉದ್ದೇಶಪೂರ್ವಕವಾಗಿಯೇ ಮಾಡುತ್ತಿರುವ ಕೆಲಸವಲ್ಲವೇ' ಎಂದು ಸಾವಯವ ಕೃಷಿ ಮಿಷನ್ ಅಧ್ಯಕ್ಷ ಡಾ.ಆನಂದ್ ಸಚಿವರ ಹಾಗೂ ಯುಪಿಎ ಸರ್ಕಾರದ ವಿರುದ್ಧ ಆರೋಪ ಮಾಡಿದ್ದಲ್ಲದೇ, ಸರ್ಕಾರದ ದ್ವಂದ್ವ ನೀತಿಯನ್ನು ಪ್ರಶ್ನಿಸಿದರು. ಆನಂದ್ ಆರೋಪಕ್ಕೆ ಕೆರಳಿದ ಸಚಿವರು, ಆನಂದ್ ನೀವು ನನ್ನ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುತ್ತಿದ್ದೀರಿ. ನಾನು ಆ ಗೆಜಟ್ ನೋಡೇ ಇಲ್ಲ. ಈ ಪಟ್ಟಿ ಬೇರೆ ಉದ್ದೇಶಕ್ಕಿರಬೇಕು. ನಾನು ಅದನ್ನು ವಿಚಾರಿಸುತ್ತೇನೆ. ಒಂದು ಪಕ್ಷ ನಿಮ್ಮ ಆರೋಪ ನಿಜವಾದರೆ ನಾನು ಬಹಿರಂಗವಾಗಿ ಕ್ಷಮೆಯಾಚಿಸುತ್ತೇನೆ. ಸುಳ್ಳಾದರೆ ನಿಮ್ಮ ಸ್ಥಾನಕ್ಕೆ ನೀವು ರಾಜೀನಾಮೆ ನೀಡಬೇಕು ಎಂದು ಹೇಳಿದರು. ತಕ್ಷಣ ನಡೆದ ಪ್ರಹಸನದಲ್ಲಿ ಜೈರಾಮ್ ರಮೇಶ್ ದೆಹಲಿ ಪರಿಸರ ಸಚಿವಾಲಯಕ್ಕೆ ಕರೆ ಮಾಡಿ ಮಾಹಿತಿ ಪಡೆದರು. ನೋಡಿ, ಇದಕ್ಕೂ ಬಿ.ಟಿ ಬದನೆಗೂ ಸಂಬಂಧವಿಲ್ಲ. ರೈತರು ಈ ೧೯೦ ತಳಿಗಳನ್ನು ರಫ್ತು ಮಾಡುವ ಸಲುವಾಗಿ ಜೀವವೈವಿಧ್ಯ ಕಾಯ್ದೆಯಿಂದ ಮುಕ್ತವಾಗಿಡುವಂತೆ ಕೋರಿದ್ದರು. ಅದರ ಅನ್ವಯ, ರೈತರಿಗೆ ಅನುಕೂಲವಾಗಲೆಂದು, ಪದೇ ಪದೇ ಸರ್ಕಾರದ ಅಥವಾ ಮಂಡಳಿ ಅನುಮತಿ ಪಡೆಯುವ ಅವಶ್ಯಕತೆ ಬಾರದಿರಲೆಂದು ಈ ರೀತಿ ಗೆಜೆಟ್ ನೋಟಿಫಿಕೇಷನ್ ಮಾಡಿದೆ ಎಂದು ಸಚಿವರ ಸಮರ್ಥಿಸಿಕೊಂಡರು.ಈ ವಿಷಯ ಕುರಿತು ಇಡೀ ಸಭಾಂಗಣ ವಾಗ್ಯುದ್ಧಕ್ಕೆ ಸಾಕ್ಷಿಯಾಯಿತು. ನಿಮಗೆ ಯಾರೋ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಸರ್ಕಾರವೇ ಬಿ.ಟಿ.ಬದನೆ ಒಪ್ಪಿಗೆ ನೀಡಲು, ಬದನೆ ತಳಿಯನ್ನು ಆ ಪಟ್ಟಿಯಲ್ಲಿ ಸೇರಿಸಿದೆ. ಇದೇ ಸರಿಯಾದ ಮಾಹಿತಿ ಎಂದು ಸಚಿವರ ವಿರುದ್ಧ ಪರಿಸರವಾದಿ ಲಿಯೋ ಸಾಲ್ಡಾನಾ ನೇರ ಆರೋಪ ಮಾಡಿದರು. ಈ ವಿಷಯವನ್ನು ಕೂಲಂಕಶವಾಗಿ ಪರಿಶೀಲಿಸಿ ಹಾಗೆ ಗೆಜೆಟ್ ಹೊರಡಿಸಿದ್ದರೆ ಅದನ್ನು ಹಿಂದಕ್ಕೆ ಪಡೆಯುವುದಾಗಿ ಸಭೆಗೆ ಸಚಿವ ರಮೇಶ್ ವಿವರಿಸಿದರು. ಈ ನಡುವೆ ರಾಷ್ಟ್ರೀಯ ಜೀವ ವೈವಿಧ್ಯಮಂಡಳಿ ಅಧ್ಯಕ್ಷ ಕೇರಳದ ವಿಜ್ಞಾನಿ ಡಾ.ವಿಜಯನ್ ಅವರನ್ನು ಈ ಗೆಜೆಟ್ ಕುರಿತು ಸಚಿವರ ಮಾಹಿತಿ ಕೇಳಿದರು. ಗೆಜೆಟ್ ಬಗ್ಗೆ ಮಾಹಿತಿ ಇಲ್ಲ. ಹಾಗೇನಾದರೂ ಸರ್ಕಾರ ಇಂಥ ಕೆಲಸ ಮಾಡಿದ್ದರೆ ಅದು ಸಮರ್ಪಕವಾದುದಲ್ಲ. ರೈತರಿಗೆ ಮೋಸ ಮಾಡಿದಂತೆ ಎಂದು ವಿಜಯ್ ಸಚಿವರಿಗೆ ನೇರವಾಗಿ ಉತ್ತರಿಸಿದರು.


CC BY SA

(19ನೇ ಪುಟದಿಂದ)

**ಸಚಿವ ಜೈರಾಮ್ ರಮೇಶ್ ಅವರ ಕೊನೆ ನುಡಿ**

ಬಿ.ಟಿ.ಬದನೆ ಕುರಿತು ಇಷ್ಟೆಲ್ಲ ವಾಗ್ಯುದ್ಧಗಳು, ಪರ-ವಿರೋಧ ಹೇಳಿಕೆಗಳು, ಆರೋಪ-ಪ್ರತ್ಯಾರೋಪಗಳು ಸಭೆಯಲ್ಲಿ ಮೊಳಗಿದರೂ ಅವೆಲ್ಲ ಕೇವಲ ಚರ್ಚೆಗೆ ಗ್ರಾಸವಾದವೇ ವಿನಃ, ಯಾವುದೇ ನಿರ್ಧಾರಕ್ಕೆ ಪೂರಕವಾಗಲಿಲ್ಲ. ಎಲ್ಲರ ಮಾತುಗಳನು ಆಲಿಸಿದ ಸಚಿವ ರಮೇಶ್ ಅವರು ಇಡೀ ಸಭೆಗೆ ಸಾರ್ವಜನಿಕ ಅಹವಾಲು ಕಾರ್ಯಕ್ರಮದ ಹಿಂದಿನ ಉದ್ದೇಶ ವಿವರಿಸಿದರು. ಆ ವಿವರಣೆ ಸಾರ ಹೀಗಿದೆ:

'ಅಕ್ಟೋಬರ್ ತಿಂಗಳಲ್ಲಿ ಜಿಇಎಸಿ ಬಿ.ಟಿ.ಬದನೆ ಪ್ರಯೋಗಕ್ಕೆ ಅನುಮತಿ ನೀಡಿದ ಕೂಡಲೇ, ಒಂದು ಸಮಿತಿ ರಚಿಸಿ, ವಿಷಯವನ್ನು ಆ ಸಮಿತಿಗೆ ರವಾನಿಸಬಹುದಿತ್ತು. ಆದರೆ ರೈತರು-ಗ್ರಾಹಕರು ಹಾಗೂ ಆಹಾರ ಸುರಕ್ಷತೆಯ ದೃಷ್ಟಿಯಿಂದ ನಾನು ಹಾಗೆ ಮಾಡಲಿಲ್ಲ. ಸಾರ್ವಜನಿಕರ ಅಭಿಪ್ರಾಯ ಹಾಗೂ ಪ್ರಜಾಪ್ರಭುತ್ವದಲ್ಲಿ ನಂಬಿಕೆಯುಳ್ಳ ಮಣ್ಣಿನ ಮಗ ನಾನು. ಅದಕ್ಕಾಗಿ ಈ ಎಂಟು ರಾಜ್ಯಗಳಲ್ಲಿ ಸಾರ್ವಜನಿಕ ಅಹವಾಲು ಸಮಾರಂಭ ಆಯೋಜಿಸಿದೆ. ೮೦೦೦ಕ್ಕೂ ಹೆಚ್ಚು ಜನರಿಂದ ಅಭಿಪ್ರಾಯ ಸಂಗ್ರಹಿಸಿದ್ದೇನೆ. ಫೆಬ್ರವರಿ ೧೦, ೨೦೧೦, ಮಧ್ಯಾಹ್ನ ೧೨.೩೦ಗೆ ಬಿ.ಟಿ.ಬದನೆ ಕುರಿತ ತೀರ್ಮಾನ ಪ್ರಕಟಿಸುತ್ತೇನೆ.

ನಾನು ಯಾವ ಕಂಪೆನಿಯ ಏಜೆಂಟ್ ಅಲ್ಲ. ಯಾರ ಪರವೂ ಅಲ್ಲ, ಯಾರ ವಿರುದ್ಧವೂ ಅಲ್ಲ. ಜನರ ಅಭಿಪ್ರಾಯದ ಮೇಲೆ ನಂಬಿಕೆಯಿಟ್ಟಿರುವವರು ನಾನು. ಬಿ.ಟಿ. ಬದನೆ ತಯಾರಿಕೆಯ ವಿಜ್ಞಾನಿಗಳ ಉದ್ದೇಶ ಒಳ್ಳೆಯದಿದೆ. ಅವರ ಅಭಿಪ್ರಾಯಕ್ಕೂ ಮನ್ನಣೆ ನೀಡುತ್ತೇವೆ. ನಿರ್ಧಾರ ತೆಗೆದುಕೊಳ್ಳುವ ಮುನ್ನ ವೈಜ್ಞಾನಿಕ ಸಂಶೋಧನೆ ಕುರಿತು ಚಿಂತಿಸಲಾಗುತ್ತದೆ. ಕೇವಲ ಪರ ವಿರೋಧಧ ಕುರಿತು ಕೈ ಎತ್ತುವವರ ಸಂಖ್ಯೆಯಿಂದ ತೀರ್ಮಾನ ನೀಡುವುದಿಲ್ಲ.

ನನಗೆ ಗೊತ್ತಿದೆ. ಖಾಸಗಿ ಕಂಪೆನಿಗಳು ಎಷ್ಟು ಜನ ರೈತರನ್ನು ಹಣ ಕೊಟ್ಟು ಬಸ್ಸು ಲಾರಿಗಳಲ್ಲಿ ಕರೆತಂದಿವೆ, ಸ್ವಯಂ ಸೇವಾ ಸಂಸ್ಥೆಗಳು ಹೇಗೆ ಸಮುದಾಯವನ್ನು ಈ ಕಾರ್ಯಕ್ರಮಕ್ಕಾಗಿ ಜಾಗೃತಗೊಳಿಸಿವೆ ಎಂದು. ಹಾಗಾಗಿ ಬಿ.ಟಿ.ಬದನೆ ಬೇಕೆ ಬೇಡವೆ ಎಂದು ಕೈ ಎತ್ತುವ ಸಂಖ್ಯೆಯಿಂದ ತೀರ್ಮಾನ ನೀಡಲಾಗುವುದಿಲ್ಲ. ನಾನು ತೆಗೆದುಕೊಳ್ಳುವ ತೀರ್ಮಾನದಿಂದ ಅರ್ಧ ಜನರಿಗೆ ಖುಷಿ, ಇನ್ನರ್ಧ ಜನರಿಗೆ ಬೇಸರವಾಗಬಹುದು. ಅಥವಾ ಸ್ವಲ್ಪ ಆಚೀಚೆ ಆಗಬಹುದು. ನನ್ನನ್ನು ಕೆಲವರು ನಿಂದಿಸಬಹುದು. ಪರವಾಗಿಲ್ಲ.

ಏಕೆಂದರೆ ಈ ಅಹವಾಲು ಕಾರ್ಯಕ್ರಮದಲ್ಲಿ ವಿಜ್ಞಾನಿಗಳಿಂದ, ರೈತರಿಂದ, ಸಾರ್ವಜನಿಕರಿಂದ, ಸಹೋದ್ಯೋಗಿಗಳಿಂದ, ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕರ್ತರಿಂದ ನಿಂದನೆಗೆ ಒಳಗಾಗಿದ್ದೇನೆ. ಈಗ ಬಿ.ಟಿ. ಬದನೆ ವಿವಾದ, ಮುಂದೊಂದು ದಿನ ಬಿ.ಟಿ. ಟಮೆಟೊ, ಮೆಣಸಿನಕಾಯಿ ಬರಬಹುದು. ಆದರೆ ಅಹವಾಲು ಕಾರ್ಯಕ್ರಮ ಮಾತ್ರ ಏರ್ಪಡಿಸುವುದಿಲ್ಲ. ಎಲ್ಲಾ ತೀರ್ಮಾನಕ್ಕೂ ಫೆಬ್ರವರಿ ೧೦, ೨೦೧೦, ಮಧ್ಯಾಹ್ನ ೧೨.೩೦ವರೆಗೆ ಕಾಯಬೇಕು. ಅಲ್ಲಿಯವರೆಗೂ ಬಿ.ಟಿ.ಬದನೆ ಕುರಿತು ಏನಾದರೂ ಮಾಹಿತಿ ಕಳಿಸಬೇಕಿದ್ದರೆ ನನ್ನ ಇ-ಮೇಲ್ ವಿಳಾಸಕ್ಕೆ ಕಳಿಸಿ. Jairam54@gmail.com, brinjal@ceeindia.com, ಮೊಬೈಲ್ ನಂಬರ್ - 09868181302' ಎಂದರು. ಮೂರೂವರೆಗಂಟೆ ನಡೆದ ಅಹವಾಲು ಸ್ವೀಕಾರದಲ್ಲಿ ವಿಜ್ಞಾನಿಗಳು ವಾದ ಮಂಡಿಸಿದರು. ಸ್ವಯಂ ಸಂಸ್ಥೆಗಳು ಘೋಷಣೆ ಕೂಗಿ, ಬಿ.ಟಿ. ಬದನೆ ವಿರುದ್ಧ ದೂರಿದವು. ವೈದ್ಯರು ಬಿ.ಟಿ. ಬೇಡ ಎಂದರು. ಆದರೆ ಬದನೆಯನ್ನು ಸೇವಿಸುವ ಗ್ರಾಹಕರನ್ನಾಗಲಿ, ಅವರಿಗೆ ತಲುಪಿಸುವ ಮಳಿಗೆಯವರ ಅಹವಲನ್ನಾಗಲಿ ಆಲಿಸುವ ವ್ಯವಧಾನ ಸಚಿವರಿಗಿರಲಿಲ್ಲ. ಸಮಯದ ಅಭಾವವೂ ಒಂದು ಕಾರಣವೆಂದರೂ, ಗ್ರಾಹಕರ ಅಭಿಪ್ರಾಯಕ್ಕೆ ಆದ್ಯತೆ ನೀಡಬೇಕಿತ್ತು ಎಂದು ಹಲವು ಕನ್ಸೂಮರ್ ಫೋರಂಗಳು ವಿರೋಧ ವ್ಯಕ್ತಪಡಿ ಸಿದವು.

ಎಷ್ಟೇ ಚರ್ಚೆಯಾಗಲಿ, ಎಷ್ಟೇ ಅಹವಾಲು ಸ್ವೀಕಾರಗಳಾಗಲಿ, ಅಂತಿಮ ತೀರ್ಮಾನ ನಡೆಯುವುದು ನಾಲ್ಕು ಗೋಡೆಗಳ ನಡುವೆ. ನಾಲ್ಕೈದು ಜನ ಆಡಳಿತಶಾಹಿಗಳ ಮಧ್ಯೆ ಮಾತ್ರ. ಅಲ್ಲಿ ನಡೆಯುವ ವಿಚಾರಗಳೇ ಕೊನೆಯದು. ಉಳಿದೆದ್ದಲ್ಲ ಕೇವಲ ಸಾಂಕೇತಿಕ, ನಾಟಕ, ಪ್ರಹಸನ, ಜನರ ಕಣ್ಣೊರೆಸುವ ತಂತ್ರ.. ಹೀಗೆ ಏನುಬೇಕಾದರೂ ಕರೆಯಬಹುದು ಎನ್ನುವುದು ಹಲವು ಸಾರ್ವಜನಿಕ ಅಹವಾಲು ಗಳನ್ನು ಕಂಡು ಬಂದ ಹಿರಿಯ ಸಾಮಾಜಿಕ ಕಾರ್ಯಕರ್ತರ ಅಭಿಪ್ರಾಯವಾಗಿತ್ತು.

**- ಗಾಣಧಾಳು ಶ್ರೀಕಂಠ**

## ಬಿ.ಟಿ. ಬದನೆ
ಬೇಕೆ ಬೇಡವೇ

# ಬಿ. ಟಿ. ಚರ್ಚೆ

ಫೆಬ್ರವರಿ ಹತ್ತನೇ ತಾರೀಖು ಹೊರಬರುವ ತೀರ್ಮಾನ ಏನೇ ಇರಲಿ, ಬಿ. ಟಿ. ಚರ್ಚೆ ಅಲ್ಲಿಗೆ ನಿಲ್ಲದು. ಇಂದು ಬದನೆ, ಮುಂದೆ ಮತ್ತೊಂದು. ಕುಲಾಂತರಿಗಳ ಪ್ರವೇಶದಿಂದ ಆಗಬಹುದಾದೇನು ಎಂಬುದರ ಕುರಿತು ಬಹಳಷ್ಟು ಚರ್ಚೆ ಆಗಬೇಕಿದೆ. ಕುಲಾಂತರಿಗಳು ಯಾಕೆ ಬೇಕು ? ಯಾರಿಗೆ ಬೇಕು ಎಂಬುದರ ಕಡೆಗೆ ಬೆಳಕು ಚೆಲ್ಲುವ ಕೆಲಸ ಆಗಬೇಕಿದೆ.

ನಿಮ್ಮೆಲ್ಲರ ಅಭಿಪ್ರಾಯಗಳೇನೇನು ? ಬರೆದು ಕಳುಹಿಸಿ. ಬಿ. ಟಿ ಕುರಿತ ಚರ್ಚೆಯಲ್ಲಿ ನೀವೂ ಭಾಗವಹಿಸಿ. ಆಯ್ದ ಬರಹಗಳನ್ನು ಕೃಷಿ ಸಂಪದದಲ್ಲಿ ಪ್ರಕಟಿಸಲಾಗುವುದು. ಬರಹ ಮುನ್ನೂರು ಪದಗಳ ಮಿತಿಯಲ್ಲಿದ್ದರೆ ಉತ್ತಮ.

ಬರಹದ ಜೊತೆ ನಿಮ್ಮ ಬಗ್ಗೆ ಕೂಡ ಮಾಹಿತಿ ಇರಲಿ (ನಿಮ್ಮ ಕೃಷಿ ಅನುಭವ, ಆಸಕ್ತಿ ಇತ್ಯಾದಿ ಸೇರಿಸಿದರೆ ಇನ್ನೂ ಉತ್ತಮ).

ನಿಮ್ಮ ಬರಹಗಳನ್ನು krushi@sampada.net ವಿಳಾಸಕ್ಕೆ ಫೆಬ್ರವರಿ ೨೦ ರ ಒಳಗಾಗಿ ಕಳುಹಿಸಿಕೊಡಿ.

## 'ಕೃಷಿ ಸಂಪದ'ಕ್ಕೆ ಚಿತ್ರಗಳು

ಕೃಷಿ ಸಂಪದದಲ್ಲಿ ಪ್ರಕಟಣೆಗೆ ಕೃಷಿಗೆ ಸಂಬಂಧಪಟ್ಟ ಚಿತ್ರಗಳನ್ನು ಕಳುಹಿಸಿಕೊಡಬಹುದು.

ಚಿತ್ರಗಳನ್ನು krushi@sampada.net ಗೆ ಕಳುಹಿಸಿಕೊಡಿ. ಚಿತ್ರಗಳು ಕ್ರಿಯೇಟಿವ್ ಕಾಮನ್ಸ್ ಲೈಸೆನ್ಸಿನಡಿ ಬಳಸುವ ಅನುಮತಿ ಇರಬೇಕು.

ವಿವರಗಳಿಗೆ ಕೊನೆಯ ಪುಟ ನೋಡಿ.

**ಓದುಗರ ಗಮನಕ್ಕೆ**

ಕೃಷಿ ಸಂಪದ ಕೃಷಿ ಹಾಗು ತಂತ್ರಜ್ಞಾನ ಆಸಕ್ತರು ತಮ್ಮ ಬಿಡುವಿನ ಸಮಯದಲ್ಲಿ ಏನೂ ಲಾಭದ ಅಪೇಕ್ಷೆಯಿಲ್ಲದೆ ತರುತ್ತಿರುವ ಇ-ಪತ್ರಿಕೆ.

ನಿಮ್ಮೆಲ್ಲರ ಪ್ರೋತ್ಸಾಹ ಇದಕ್ಕೆ ಅತ್ಯವಶ್ಯಕ. ನಿಮ್ಮ ಸ್ನೇಹಿತರೊಂದಿಗೆ ಕೃಷಿ ಸಂಪದ ಕುರಿತು ಮಾಹಿತಿ ಹಂಚಿಕೊಳ್ಳಿ. ಸಾಧ್ಯವಾದರೆ ನೀವೂ ಭಾಗವಹಿಸಿ.

ವ್ಯಾಕರಣ, ದೋಷಗಳು ಇದ್ದಲ್ಲಿ ಗಮನಕ್ಕೆ ತನ್ನಿ.


cc BY SA

# ಕಂಬಳ

ಕಂಬಳ ಕರಾವಳಿ ಕರ್ನಾಟಕದ ಒಂದು ಜಾನಪದ ಕ್ರೀಡೆ. ದಷ್ಟ ಪುಷ್ಟವಾಗಿ ಬೆಳೆಸಿದ ಕೋಣಗಳನ್ನು ಹಸನಾಗಿ ಹದ ಮಾಡಿದ ಮಣ್ಣಿನ ಗದ್ದೆಯಲ್ಲಿ ಓಡಿಸುವ ಸ್ಪರ್ದೆ ಇದು. ದಕ್ಷಿಣ ಕನ್ನಡ ಮತ್ತು ಈಗಿನ ಉಡುಪಿ ಜಿಲ್ಲೆಯ ಜಾನಪದದೊಂದಿಗೆ ಹಾಸು ಹೊಕ್ಕಾಗಿದೆ ಈ ಕ್ರೀಡೆ. ಕರಾವಳಿಯ ರೈತಾಪಿ ಜನರು ಭತ್ತದ ಕೊಯಿಲಿನ ನಂತರ ತಮ್ಮ ಮನರಂಜನೆಗೆಂದು ಏರ್ಪಡಿಸುತ್ತಿದ್ದ ಈ ಕ್ರೀಡೆ ಕಳೆದ ಅನೇಕ ವರ್ಷಗಳಿಂದ ಸಾಂಘಿಕ ಬಲದೊಂದಿಗೆ ಬೆಳೆಯುತ್ತಿದೆ. ಎರಡು ಕೋಣಗಳ ಕುತ್ತಿಗೆಗೆ ನೊಗ ಕಟ್ಟಿ ಅವುಗಳನ್ನು ಓಡಿಸಲಾಗುವ ಈ ಕ್ರೀಡೆಯಲ್ಲಿ ಕೋಣಗಳೊಂದಿಗೆ ಅವುಗಳನ್ನು ಓಡಿಸುವಾತನ ಪಾತ್ರವೂ ಮುಖ್ಯ.


ಮಾಹಿತಿ: ಕನ್ನಡ ವಿಕಿಪೀಡಿಯ

[ನೀವೂ ಮಾಹಿತಿ ಸೇರಿಸಲು ಇಲ್ಲಿ ಕ್ಲಿಕ್ ಮಾಡಿ]



## ಚಿತ್ರ - ಚಾವಡಿ

ಕಲಾವಿದ: ಅರುಣ್ ಬಾರ್ಬೋಜ





http://flickr.com/photos/arunbarboza/



CC BY SA

# ಕಂಬಳ







ಚಿತ್ರ: ಅರುಣ್ ಬಾರ್ಬೋಜ



cc BY SA

ಶತಮಾನಗಳಿಂದ ನಮ್ಮ ದೇಶದಲ್ಲಿ ಸೂಕ್ಷ್ಮ ಕ್ರಿಮಿನಾಶಕವಾಗಿ ಕಹಿಬೇವು ಬಳಕೆಯಾಗುತ್ತಿದೆ. ಅದರ ಬೀಜ, ಎಲೆ, ಹೂ, ತೊಗಟೆ ಎಲ್ಲದರಲ್ಲಿಯೂ ಸೂಕ್ಷ್ಮ ಕ್ರಿಮಿನಾಶಕ ಗುಣವಿದೆ. ಅಕ್ಕಿ ಕೆಡದಂತೆ, ಅದರೊಂದಿಗೆ ಕಹಿಬೇವಿನ ಎಲೆಗಳನ್ನು ಹಾಕಿಡುತ್ತಾರೆ. ಬೇವಿನ ಗಿಡದೊಳಗೆ ಜೀವಿಸುತ್ತಿರುವ ವಿವಿಧ ಬೂಸ್ಟುಗಳೇ ಈ ಗುಣಕ್ಕೆ ಕಾರಣ ಎಂದೀಗ ಸಂಶೋಧನೆಯಿಂದ ತಿಳಿದು ಬಂದಿದೆ. ಉತ್ತರ ಪ್ರದೇಶದ ಬನಾರಸ್ ಹಿಂದೂ ವಿಶ್ವವಿದ್ಯಾಲಯ ಮತ್ತು ಯುಎಸ ಎ ದೇಶದ ಮೊಂಟಾನಾ ವಿಶ್ವವಿದ್ಯಾಲಯದ ಸಂಶೋಧಕರು ನಡೆಸಿದ ಈ ಸಂಶೋಧನೆಯ ಫಲಿತಾಂಶವನ್ನು ಮೈಕ್ರೋಬಯಲ್ ಇಕಾಲಜಿ ಎಂಬ ಸಂಶೋಧನಾ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ಕಹಿಬೇವಿನ ಮರದ ವಿವಿಧ ಭಾಗಗಳಲ್ಲಿರುವ ೧೮ ವಿಧದ ಬೂಸ್ಟುಗಳನ್ನು ಅವರು ಗುರುತಿಸಿದ್ದಾರೆ. ಇಂತಹ ಅಧ್ಯಯನಗಳನ್ನು ಹಿಂದೆಯೂ ನಡೆಸಲಾಗಿತ್ತು. ಸಸ್ಯಗಳೊಳಗೆ ಜೀವಿಸುವ ಸೂಕ್ಷ್ಮ ಜೀವಿಗಳು ಜೈವಿಕವಾಗಿ ಕ್ರಿಯಾಶೀಲವಾದ ರಾಸಾಯನಿಕಗಳನ್ನು ಉತ್ಪಾದಿಸುತ್ತವೆ ಎಂದು ಆಗಲೂ ಪತ್ತೆ ಮಾಡಲಾಗಿತ್ತು. ಈ ರಾಸಾಯನಿಕಗಳು ಕೃಷಿ ಹಾಗೂ ಔಷಧಿ ಬಳಕೆಗಾಗಿ ಉಪಯುಕ್ತ . ಮೊಂಟಾನಾ ವಿಶ್ವವಿದ್ಯಾಲಯದ ಗ್ಯಾರಿ ಸ್ಟ್ರೋಬೆಲ್ ಈ ಸಂಶೋಧನೆಯಲ್ಲಿ ಭಾಗವಹಿಸಿದ್ದು ಮುಂಚೆಯೂ ಇಂತಹ ಸಂಶೋಧನೆ ನಡೆಸಿದ್ದರು.



ಕಹಿ ಬೇವು: ಸೂಕ್ಷ್ಮ ಕ್ರಿಮಿನಾಶಕ


ಆಗ ಟಾಕ್ಸೊಮೈಸೆಸ್ ಅಂಡ್ರಿಯಾನೆ ಎಂಬ ಜೈವಿಕವಾಗಿ ಕ್ರಿಯಾಶೀಲವಾದ ರಾಸಾಯನಿಕ ಉತ್ಪಾದಿಸುವ ಬೂಸ್ಟನ್ನು ಪತ್ತೆ ಮಾಡಿದ್ದರು. ಅದು ಉತ್ತರ ಅಮೆರಿಕದ ವಾಯುವ್ಯ ಭಾಗದಲ್ಲಿ ಬೆಳೆಯುವ ಸೂಜಿಯೆಲೆ ಸಸ್ಯ ಪ್ಯಾಸಿಫಿಕ್ ಯೆವ್ (ಟಾಕ್ಸಸ್ ಬ್ರೆವಿಪೊಲಿಯಾ) ದಲ್ಲಿಯೂ ಜೀವಿಸುತ್ತದೆ. ಈ ಸಸ್ಯ ಉತ್ಪಾದಿಸುವ ಟಾಕ್ಸೊಲ್ ಎಂಬ ಜೈವಿಕವಾಗಿ ಕ್ರಿಯಾಶೀಲವಾದ ರಾಸಾಯನಿಕವನ್ನು ಈ ಬೂಸ್ಟ ಕೂಡ ಉತ್ಪಾದಿಸುತ್ತದೆ. ಸ್ತನ ಕ್ಯಾನ್ಸರಿನ ಚಿಕಿತ್ಸೆಗೆ ನೀಡುವ ಔಷಧಿಗಳ ತಯಾರಿಕೆಗೆ ಟಾಕ್ಸೊಲ್ ಬಳಕೆ.

ಭಾರತದ ಮೂರು ಪ್ರದೇಶಗಳಿಂದ ಸಂಗ್ರಹಿಸಿದ ಕಹಿಬೇವಿನ ಮರಗಳ ವಿವಿಧ ಭಾಗಗಳ ಸ್ಯಾಂಪಲ ಗಳನ್ನು ವಿಶ್ಲೇಷಿಸಿದರು. ಅವುಗಳಲ್ಲಿ ಪ್ರಧಾನವಾಗಿ ನಾಲ್ಕು ವಿಧದ ಬೂಸ್ಟ ಗಳು ಪತ್ತೆಯಾದವು. ಬಹುಪಾಲು ಬೂಸ್ಟುಗಳು ಜಾಸ್ತಿ ಕಂಡುಬಂದದ್ದು ಎಲೆಗಳಲ್ಲಿ. ‘ಈ ವರೆಗೆ ಬ್ಯಾಕ್ಟೀರಿಯಾ ಪ್ರತಿರೋಧ ಗುಣವನ್ನು ಒಂದು ಬೂಸ್ಟಿನಲ್ಲಿ ಪತ್ತೆ ಮಾಡಿದ್ದೇವೆ. ಇತರ ಬೂಸ್ಟುಗಳ ಗುಣಗಳ ಬಗ್ಗೆ ಸಂಶೋಧನೆ ಮುಂದುವರಿಸಿದ್ದೇವೆ’ ಎನ್ನುತ್ತಾರೆ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಸಂಶೋಧಕ ಆರ್. ಎನ್. ಖಾರ್ವಾರ್. ಕಹಿಬೇವು ನಮ್ಮ ದೇಶದಲ್ಲಿ ಸಹಜವಾಗಿ ಬೆಳೆಯುವ ಸಸ್ಯವಾಗಿದ್ದು ಅದರ ಬಗ್ಗೆ ಇನ್ನಷ್ಟು ಸಂಶೋಧನೆ ನಡೆಯಬೇಕಾಗಿದೆ. ಅದರ ವಿಶೇಷ ಗುಣಗಳನ್ನು ನಮ್ಮ ಪೂರ್ವಿಕರು ಪತ್ತೆ ಮಾಡಿದ್ದರೂ, ಅವುಗಳಿಗೆ ಪುರಾವೆ ಸಾಲದು. ಇಂತಹ ಸಂಶೋಧನೆಗಳಿಂದ ಕಹಿಬೇವಿನ ವಿಶೇಷತೆ ಇನ್ನಷ್ಟು ಖಚಿತವಾಗಲಿದೆ.

**- ನವನೀತ ಕುಮಾರ್**

ಫೋಟೋ: ನಾಡಿಗ್

## ಕಾರ್ಟೂನ್





CC BY SA

# ಮೊದಲ ಪ್ರಯತ್ನದ ತೊಡರುಗಳು

ಸಾವಯವ ಕೃಷಿ ಬಯಸುವ ಚಿಂತಕರ ಸಮುದಾಯಕ್ಕೂ ಸ್ವತಂತ್ರ ತಂತ್ರಾಂಶಕ್ಕೂ ಸ್ವಾಭಾವಿಕ ಸಂಬಂಧವಿದೆ. ಹೇಗೆ? ಎಲ್ಲವನ್ನೂ ತನ್ನ ಮುಷ್ಟಿಯಲ್ಲಿಟ್ಟುಕೊಳ್ಳಲು ಬಯಸುವ ಮಲ್ಟಿನ್ಯಾಶನಲ್ಲುಗಳ ಕಬಂಧಬಾಹುವಿನಿಂದ ಹೊರಬರುವ ಪ್ರಯತ್ನಗಳು ಇವೆರಡೂ. ಅಚ್ಚರಿಯೆಂದರೆ ಮಲ್ಟಿನ್ಯಾಶನಲ್ಲುಗಳು ಹಣದ ಹೊಳೆ ಸುರಿಸಿ ನಡೆಸಿದ ಸಂಶೋಧನೆಗಳಿಗಿಂತ ಹೆಚ್ಚಿನ ಸಹಾಯವಿಲ್ಲದೆ ಪ್ರಾರಂಭವಾದ ಸಮುದಾಯ ಪ್ರಯತ್ನಗಳು ಹಲವು ಸಂದರ್ಭಗಳಲ್ಲಿ ಈಗ ಉತ್ತಮ ಪ್ರಯತ್ನಗಳೆನಿಸಿಕೊಳ್ಳುತ್ತಿರುವುದು!

ತಂತ್ರಜ್ಞಾನ ಜಗತ್ತಿನಲ್ಲೂ ಅಷ್ಟೇ. ಸ್ವತಂತ್ರ ತಂತ್ರಾಂಶ ಯೋಜನೆಗಳು ಇಂದು (ತಂತ್ರಾಂಶ ತಜ್ಞರ) ಸಮುದಾಯ ಪ್ರಯತ್ನಗಳಿಂದಲೇ ಬೆಳೆಯುತ್ತ ಬಂದಿದೆ. ಅಷ್ಟೇ ಅಲ್ಲ, ಜಗತ್ತಿನ ದೊಡ್ಡ ದೊಡ್ಡ ಕಂಪೆನಿಗಳು ಹಣದ ಹೊಳೆ ಹರಿಸಿ ಮಾಡಲು ಸಾಧ್ಯವಾಗದ ಕೆಲಸಗಳು ಇಲ್ಲಿ ಹಲವು ಸಂದರ್ಭಗಳಲ್ಲಿ ಸಾಧ್ಯವಾಗುತ್ತಿದೆ. ಜಗತ್ತಿನಾದ್ಯಂತ ಪ್ರಮುಖ ಯೋಜನೆಗಳಲ್ಲಿ ಈ ತಂತ್ರಾಂಶಗಳು ಬಳಕೆಯಾಗುತ್ತಿವೆ.

ಸ್ವತಂತ್ರ ತಂತ್ರಾಂಶಗಳಾದ ಗ್ನು/ಲಿನಕ್ಸ್, ಇಂಕ್ ಸ್ಕೇಪ್ ಬಳಸಿ ಉತ್ತಮ ಆಧುನಿಕ ವ್ಯವಸ್ಥೆ ಕನ್ನಡ - ಯೂನಿಕೋಡ್ ನಲ್ಲಿ ಮೊದಲ ಬಾರಿಗೆ ಕೃಷಿ ಸಂಪದವನ್ನು ತಂದಿದ್ದೇವೆ. ಪುಟ್ಟ ಮಗು ಮೊದಲ ಹೆಜ್ಜೆ ಇಡುತ್ತಿರುವಂತೆ ಈ ಯತ್ನ. ನಿಮ್ಮೆಲ್ಲರ ಪ್ರೋತ್ಸಾಹ ಈ ಪ್ರಯತ್ನಕ್ಕೆ ಬೇಕು. ಈ ಸಂಚಿಕೆಯ ಹಲವೆಡೆ ಯೂನಿಕೋಡ್ ಬಳಕೆಯಲ್ಲಾದ ತೊಡರುಗಳು ನಿಮಗೆ ಕಾಣಸಿಗುವುದು.
(ಉದಾಹರಣೆಗೆ: ಇನ್ಶೂರೆನ್ಸ್‌ಬದಲಿಗೆ ಇನ್ಶೂರೆನ್ಸ ಇತ್ಯಾದಿ)
ಹಾಗೂ ಅಲ್ಲಲ್ಲಿ ಬಿಡಿಯಾಗಿ ಕಾಣುವ ಅಕ್ಷರಗಳು.
ಈ ತೊಂದರೆಗಳು ಸದ್ಯಕ್ಕೆ ಕನ್ನಡಕ್ಕಾಗಿ ಸಂಪೂರ್ಣವಾದ ಹಾಗು ಸಮರ್ಪಕವಾದ ಯೂನಿಕೋಡ್ ಫಾಂಟುಗಳು ಇಲ್ಲದೇ ಇರುವುದರಿಂದ. ಹಾಗೆಂದು ಕನ್ನಡ ಯೂನಿಕೋಡ್ ಬಳಸದೇ ಉಳಿದರೆ ಹೊಸ ಫಾಂಟುಗಳ ಅಭಿವೃದ್ಧಿಯಾಗುವುದಿಲ್ಲ, ಈಗ ಲಭ್ಯವಿರುವ ಫಾಂಟುಗಲ್ಲಿರುವ ತೊಂದರೆಗಳು ಸರಿಯಾಗುವುದಿಲ್ಲ.
ಮುಂಬರುವ ದಿನಗಳಲ್ಲಿ ನಾವು ಯೂನಿಕೋಡ್ ಬಳಸುತ್ತ ಹೋದಂತೆ ಇವೆಲ್ಲ ತೊಂದರೆಗಳು ಸರಿಯಾಗುತ್ತ ಹೋಗಲಿವೆ. ಈ ನಿಟ್ಟಿನಲ್ಲಿ ಸ್ವತಂತ್ರ ತಂತ್ರಾಂಶಗಳ ಬಳಕೆ, ಯೂನಿಕೋಡ್ ಬಳಕೆ ಬಹಳ ಮುಖ್ಯ. ಎಷ್ಟು ಬಳಸುತ್ತೇವೋ ಅಷ್ಟು ಒಳ್ಳೆಯದು.

ಕನ್ನಡದಲ್ಲಿ ಸ್ವತಂತ್ರ ತಂತ್ರಾಂಶ ಹಾಗು ಯೂನಿಕೋಡ್ ಕನ್ನಡ ಬಳಸಿ ಇ-ಪತ್ರಿಕೆ ತರುವ ಮೊಟ್ಟ ಮೊದಲ ಪ್ರಯತ್ನ ಕೃಷಿ ಸಂಪದದ ಈ ಸಂಚಿಕೆ. ಕನ್ನಡ ತಂತ್ರಾಂಶ ಹಾಗು ಕೃಷಿ ಇವೆರಡು ಕೂಡುವ ರಸ್ತೆಗೆ ಇದು ಮೈಲಿಗಲೂ ಆಗಬಹುದು. ಬಹಳಷ್ಟು ಮೊದಲುಗಳಿಗೆ ನಾಂದಿ ಹಾಡಬಲ್ಲುದು. ಈ ಪ್ರಯತ್ನ 'ಕೃಷಿ'ಯಷ್ಟು ಗಹನವಾದ ವಿಷಯದ ಸುತ್ತ ನಡೆಯುತ್ತಿದೆ ಎಂಬ ಖುಷಿ ನಮ್ಮದು.

ಈ ಸಂಚಿಕೆಯಲ್ಲಿರುವ ತೊಂಡರುಗಳನ್ನು ಮೀರಿ ಹೊಸತುಗಳನ್ನು ನೀಡುತ್ತ ಮತ್ತಷ್ಟು ಉತ್ತಮ ಸಂಚಿಕೆಗಳನ್ನು ತರುವ ಆಸಕ್ತಿ ಕೂಡ ಉಂಟು. ನೀವೂ ಜೊತೆಗೂಡಬಹುದು!

**- ಹರಿ ಪ್ರಸಾದ್ ನಾಡಿಗ್**

# ಯೂನಿಕೋಡ್ ಕನ್ನಡ, ಹೇಗೆ?

**ಹೇಗೆ ಟೈಪ್ ಮಾಡಲಿ?**

baraha.com ನಿಂದ ಬರಹ IME ಡೌನ್ಲೋಡ್ ಮಾಡಿಕೊಳ್ಳಿ.

**'ಮೂ' ಎನ್ನುವುದು 'ಮಾ' ಎಂದು ಬರುತ್ತದಲ್ಲ?**

ಇದು ವಿಂಡೋಸ್ XP ಆಪರೇಟಿಂಗ್ ಸಿಸ್ಟಮಿನಲ್ಲಿ ಇನ್ನೂ ತುಂಗ ಫಾಂಟಿನ ಹಳೆಯ ಆವೃತ್ತಿ ಸಿಗುತ್ತಿರುವುದರಿಂದ ಸಮಸ್ಯೆ. ಹೊಸ ಆವೃತ್ತಿ ಹಾಕಿಕೊಂಡಲ್ಲಿ ಸರಿಯಾಗುತ್ತದೆ.

ಹೆಚ್ಚಿನ ಸಹಾಯಕ್ಕೆ tech-volunteers@sampada.net ವಿಳಾಸಕ್ಕೆ ಇ-ಪತ್ರ ಕಳುಹಿಸಿ.

# ಕ್ರಿಯೇಟಿವ್ ಕಾಮನ್ಸ್

ಈಗಿನ ಡಿಜಿಟಲ್ ಯುಗದಲ್ಲಿ ಮಾಹಿತಿ ಅಥವ ಕ್ರಿಯೇಟಿವ್ ಕೆಲಸವನ್ನು ಮರುಬಳಕೆ ಮಾಡಿಕೊಳ್ಳಲು ನಿಯಮಿತ ಅನುಮತಿ ಮುಂಚಿತವಾಗಿ ನೀಡಲು ಹಲವು ಲೈಸೆನ್ಸುಗಳು ಲಭ್ಯವಿದೆ. ಕ್ರಿಯೇಟಿವ್ ಕೆಲಸಗಳಿಗೆ ಇದರಲ್ಲಿ ಸೂಕ್ತವಾದ ಲೈಸೆನ್ಸ Creative Commons.

ಕೃಷಿ ಸಂಪದ Creative Commons Attribution Share Alike ಲೈಸೆನ್ಸಿನಡಿ ಲಭ್ಯವಿದೆ. 'ಕೃಷಿ ಸಂಪದ'ವನ್ನು ಮುಕ್ತವಾಗಿ ಇತರರೊಂದಿಗೆ ಹಂಚಿಕೊಳ್ಳಬಹುದು. ಆದರೆ ಕೆಲವು ಷರತ್ತುಗಳು:
ಲೇಖಕರ ಹೆಸರನ್ನು, ಮಾಹಿತಿಯ ಮೂಲವನ್ನು ತೆಗೆದುಹಾಕಕೂಡದು.
ಈ ಸಂಚಿಕೆಯನ್ನು ಯಾವುದೇ ರೀತಿಯಲ್ಲಿ ಬದಲಾವಣೆ ಮಾಡಿದರೆ ಇದೇ ಲೈಸೆನ್ಸಿನಡಿ ಹಂಚಿಕೊಳ್ಳಬೇಕು.
ಹೆಚ್ಚಿನ ಮಾಹಿತಿಗೆ:
http://creativecommons.org/licenses/by-sa/3.0/ ನೋಡಿ.

# ಸಂಪರ್ಕ

ಅಡ್ಡೂರು ಕೃಷ್ಣರಾವ್ - addoor@gmail.com
ಶಿವಾನಂದ ಕಳವೆ - kanchitte@gmail.com
ಹರಿಪ್ರಸಾದ್ ನಾಡಿಗ್ - hpnadig@gmail.com
ಹರ್ಷವರ್ಧನ ಶೀಲವಂತ್ -
harshavardhan.sheelavant@gmail.com

ಇಲ್ಲಿ ಬಿಟ್ಟು ಹೋದ ಲೇಖಕರ ಸಂಪರ್ಕ ಹಾಗು ಉಳಿದಂತೆ
krushi@sampada.net
ಗೆ ಬರೆದು ಮಾಹಿತಿ ಪಡೆಯಬಹುದು.


cc BY SA